


ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ ಡಿಸೆಂಬರ್ 18. 1988 ಸಂಪುಟ-10, ಸಂಚಿಕೆ-49-50 ರೂ.1.00

ಬೆಂಗಳೂರಿನಲ್ಲಿ ಕೆಂಬಾವುಟಗಳ ಸಾಲು ಸಾಲು....

ಅದೊಂದು ವಿಶೇಷವಾದ ದಿನ. ಎಲ್ಲೆಡೆ ಡೊಳ್ಳು, ನಗಾರಿಗಳ ಏಕನಾದ. ಕರ್ನಾಟಕದ ಎಲ್ಲೆಡೆಗಳಿಂದ ಬಂದಿದ್ದ ಸಹಸ್ರಾರು ರೈತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳೆಯರು ವಿಧಾನ ಸೌಧದಿಂದ ಸಾಲುಸಾಲಾಗಿ ಬಸವನಗುಡಿ ಯೆಡೆಗೆ ಮೆರವಣಿಗೆ ಹೊರಟಿದ್ದರು.

ಕಂಕುಳಲ್ಲಿ ಕೂಸು, ನೆತ್ತಿಯ ಮೇಲೆ ರೊಟ್ಟಿಯ ಗಂಟು, ಟ್ರಂಕುಗಳು ಕೈಯಲ್ಲಿ ಕುಡುಗೋಲು ಸುತ್ತಿಗೆಯ ಕೆಂಬಾವುಟ ಹೋರಾಟದ ಸಾಗರಕ್ಕೆ ಕರ್ನಾಟಕದ ಮೂಲೆ ಮೂಲೆಗಳಿಂದ ಸಾವಿರಾರು ನದಿಗಳು ಹರಿದು ಬಂದಿದ್ದವು. ಮುಂದೆ ಬಾನಚುಂಬಿಸುವ ಕೆಂಬಾವುಟ. ಹಿಂದೆ ಕರ್ನಾಟಕ ರಾಜ್ಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 13ನೇ ರಾಜ್ಯಸಮ್ಮೇಳನವನ್ನು ಪ್ರತಿನಿಧಿಸಲು 13 ಕೆಂಬಾವುಟ ಹಿಡಿದ ಕೆಂಪುಸೇನೆಯ ಮಹಿಳೆಯರು.

ಆರಂಭದಲ್ಲಿ 'ಡ್ರಂ'ನ ಲಯಬದ್ಧ ಬಡಿತಕ್ಕೆ ನೂರಾರು ಕೆಂಪು ಸ್ವಯಂ ಸೇವಕರ ಲೆಕ್ಕ ತಪ್ಪದ ಶಿಸ್ತಿನ ಹೆಜ್ಜೆಗಳು. ಹಿಂದೆ ಸಹಸ್ರ ಸಹಸ್ರ ಜನ. ಎಲ್ಲರ ಘೋಷಣೆ "ಒಂದೇ -ತ್ರಿವೆಂಡ್ರಮ್‌ಗೆ ಮುನ್ನಡೆಯಿರಿ.

ಮಾರ್ಕ್ಸ್‌ವಾದಿ ಕಮ್ಯು ನಿಸ್ಟ್ ಪಕ್ಷಕ್ಕೆ ಜಯವಾಗಲಿ. ನಗರದ ಬೀದಿ ಬೀದಿಗಳಲ್ಲಿ ಕೆಂಬಾವುಟಗಳ ಸಾಲು ಸಾಲು. ಜನಪದ, ಸಂಗೀತದ ಕಲಾವಿದರು ಹಾಡುತ್ತಿದ್ದಂತೆ ಕಾಮ್ರೇಡ್ ಲೆನಿನ್ ಕೊಟ್ಟಕರೆಗೆ ಕೆಂಪುಸೇನೆ ಮುಂದೆ ಮುಂದೆ ಸಾಗುತ್ತಿತ್ತು.

ಕರ್ನಾಟಕ ಕನ್ನಡಿಗರಿಗಾದರೆ, ಮಹಾರಾಷ್ಟ್ರ ಮರಾಠಿ ಗಳಾದರೆ, ತಮಿಳುನಾಡು ತಮಿಳಿನವರಿಗಾದರೆ ಭಾರತ ಯಾರಿಗೆ? ಅಮೇರಿಕಕ್ಕೆ? ಅಲ್ಲವೆ, ಕಾಂ.ಬಿ.ಟಿ. ರಣದಿವೆ, ಭಾರತದ ವಿಚ್ಛಿದ್ರಕಾರಿ ಶಕ್ತಿಗಳತ್ತ ತಮ್ಮ ಬಿರುಸಿನ ಭಾಷಣದಲ್ಲಿ ಎಚ್ಚರಿಸುತ್ತಿದ್ದರು.


ಎಲ್ಲೆಡೆಯೂ ಕೋಮುವಾದಿ ಶಕ್ತಿಗಳು ಹೆಚ್ಚುತ್ತಿದ್ದರೆ ದೇಶದ ಏಕತೆ ಅಪಾಯದಲ್ಲಿದೆ. ಅದನ್ನು ಕಾಪಾಡಲು ರೈತರು ಕಾರ್ಮಿಕರು ಮತ್ತು ಎಲ್ಲಾ ವರ್ಗದ ಜನತೆ ಹೋರಾಟ ನಡೆಸಬೇಕು ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕ ಹಾಗೂ ಪೊಲಿಟ್‌ಬ್ಯೂರೋ ಸದಸ್ಯ ಬಿ.ಟಿ.ರಣದಿವೆ ಕರೆ ನೀಡಿದರು.

ಬೆಂಗಳೂರಿನಲ್ಲಿ ನವೆಂಬರ್ 27ರಿಂದ 30ರವರೆಗೆ ನಾಲ್ಕು ದಿನಗಳ ಕಾಲನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 13ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಕಾಂಗ್ರೆ ಪಕ್ಷ ಏಕತೆ ರಕ್ಷಿಸುವ ಸ್ಥಿತಿಯಲಿಲ್ಲ ಬದಲಾಗಿ ಸರ್ವಾಧಿಕಾರವನ್ನು ಸ್ಥಾಪಿಸಲು ಹೊರಟಿದೆ ಎಂದರು.

ವಿರೋಧಿ ಪಕ್ಷಗಳು ಒಗ್ಗೂಡಲು ಸಮಯ ತೆಗೆದುಕೊಳ್ಳುತ್ತಿರುವಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ನಡೆಸುತ್ತಾ ಬಂದಿದೆ ಎಂದರು. ಪಂಜಾಬಿನಲ್ಲಿ,ಡಾರ್ಜಿಲಿಂಗ್‌ನಲ್ಲಿ,ತ್ರಿಪುರಾದಲ್ಲಿ ನಮ್ಮ ಸದಸ್ಯರು ತಮ್ಮ ಪ್ರಾಣತೆತ್ತು ವಿಚ್ಛಿದ್ರಕಾರಿಶಕ್ತಿಗಳ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ ಎಂದರು.

ರಾಜೀವ್‌ಗಾಂಧಿಯವರು ಸರ್ವಾಧಿಕಾರಿ ಸರ್ಕಾರ ತರುವತ್ತ ಹೆಜ್ಜೆ ಹಾಕುತ್ತಿದ್ದಾರೆ. ತಮಿಳುನಾಡು ಚುನಾವಣೆಗೆ ಅವರು ನೆಲಹದ ಮಾಡಿಕೊಳ್ಳುತ್ತಿದ್ದಾರೆ. ತಮಿಳು ನಾಡಿಗೆ ಪದೇ ಪದೇ ಭೇಟಿನೀಡಿ ಹರಿಜನರಿಗೆ, ಗಿರಿಜನರಿಗೆ, ಉಳಿದವರಿಗೆ ಅನೇಕ ಕಾರ್ಯಕ್ರಮವನ್ನು ಘೋಷಿಸಿದ್ದಾರೆ. ತಮಿಳುನಾಡಿನ ಚುನಾವಣೆಯಲ್ಲಿ ಗೆದ್ದರೆ ಕಾಂಗ್ರೆಪಕ್ಷ ಲೋಕಸಭೆ ಚುನಾವಣೆಗೆ ಹೋಗಲಿದೆ. ಆದ್ದರಿಂದ ತಮಿಳು ನಾಡಿನ ಚುನಾವಣೆ ಹಾಗೂ ಮುಂಬರುವ ಲೋಕಸಭಾ ಚುನಾವಣೆಗಳನ್ನು ವಿರೋಧಪಕ್ಷಗಳು ಗಂಭೀರವಾಗಿ ಪರಿಗಣಿಸಿ ಕಾಂಗ್ರೆಸರ್ಕಾರವನ್ನು ಹಿಮ್ಮೆಟ್ಟಿಸಬೇಕು ಎಂದರು.

ವಿರೋಧಪಕ್ಷಗಳು ವಿ.ಪಿ.ಸಿಂಗ್‌ರವರ ಗೆಲುವಿನಿಂದ ಸಂತೃಪ್ತಿಯಾಗಿ ಕೂರಬಾರದು. ಕಾರ್ಯಕ್ರಮದ ಆಧಾರದ ಮೇಲೆ ಕಾಂಗ್ರೆ ಪಕ್ಷಕ್ಕೆ ವಿರೋಧವಾಗಿ ಪ್ರಬಲವಾದ ಪ್ರತಿಪಕ್ಷ ಕಟ್ಟುವ ಕೆಲಸವನ್ನು ತ್ವರಿತಗೊಳಿಸಬೇಕು.



13ನೇ ಅಖಿಲ ಭಾರತ ಸಮ್ಮೇಳನಕ್ಕೆ ನಡೆಸಿದ ಸ್ಥಳದಲ್ಲಿ ಪೋಸ್ಟರ್ ರಚಿಸುವ ಸ್ಪರ್ಧೆಯಲ್ಲಿ ಮೊದಲ ಬಹುಮಾನಗಳಿಸಿದ ಪೋಸ್ಟರ್ ಡಿಸೈನ್

ಸಂತೋಷದಕುಟುಂಬದಿಂದ ಕ್ರಾಂತಿಕಾರಿ ಸಮಿತಿಯೆಡೆಗೆ

ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮುನ್ನಡೆಯುತ್ತಿದೆ ಎಂಬುದನ್ನು ಇತ್ತೀಚೆಗೆ ನವೆಂಬರ್ 27ರಿಂದ 30ರವರೆಗೆ ನಡೆದ .ಪಕ್ಷದ 13ನೇ ಸಮ್ಮೇಳನ ತೋರಿಸಿಕೊಟ್ಟಿದೆ. 13ನೇ ರಾಜ್ಯ ಸಮ್ಮೇಳನದಲ್ಲಿ ನೆರೆದ 250 ಕ್ಕೂ ಹೆಚ್ಚು ಪ್ರತಿನಿಧಿಗಳು 28 ಸದಸ್ಯರುಳ್ಳ ಒಂದು ಬಲಿಷ್ಠವಾದ ವಯಸ್ಸಿನಲ್ಲೂ, ಅನುಭವದಲ್ಲೂ ಹಿರಿಯ ಮುಖಂಡರನ್ನು ಕಿರಿಯ ಮುಖಂಡರನ್ನು ಒಳಗೊಂಡಿದ್ದ ರಾಜ್ಯಸಮಿತಿಯನ್ನು ಸರ್ವಾನುಮತದಿಂದ ಆರಿಸಿದರು. ಸುಮಾರು 40-50 ಸಾವಿರ ಜನಸಮುದಾಯಕ್ಕೆ ಈ ಸಮಿತಿಯ ಸದಸ್ಯರನ್ನು ಒಬ್ಬೊಬ್ಬರನ್ನಾಗಿ ಪರಿಚಯಮಾಡಿಕೊಟ್ಟಾಗ ಅವರಿಗೆ ಸಿಕ್ಕಿದ ಆದರದ ಸ್ವಾಗತ ಇದಕ್ಕೆ ಸಾಕ್ಷಿ.

1969-70ರಲ್ಲಿ ಗುಲ್ಬರ್ಗಾದಲ್ಲಿ ಪಕ್ಷದ 9ನೇ ಸಮ್ಮೇಳನ ನಡೆದಾಗ ಕೊನೆಯದಿನ ಹೊಸ ಸಮಿತಿಗೆ ಹಳೆಯ ಸಮಿತಿಯ ಸದಸ್ಯರನ್ನು ಸೂಚಿಸುವ ಕಾಲ ಬಂದಾಗ ಆಗಿನ ಕಾರ್ಯದರ್ಶಿಯವರಾದ ಎಂ.ಎಚ್.ಕೃಷ್ಣಪ್ಪನವರು ಕಾಂ.ಇ.ಎಮ್.ಎಸ್. ನಂಬೂದರಿಪಾದ್‌ರ ಸಮಕ್ಷಮದಲ್ಲಿ "ಹಿಂದಿನ ಸಮಿತಿಯನ್ನೇ ಮುಂದಿನ ಸಮಿತಿಯಾಗಿ ನಾನು ಸೂಚಿಸುತ್ತೇನೆ ಎಂದರು. ಕೂಡಲೇ ಇ.ಎಂ.ಎಸ್. ಇದು ಆಶ್ಚರ್ಯಕರ ಸಮ್ಮೇಳನದಲ್ಲಿ ಟೀಕೆ, ಸ್ವಯಂಟೀಕೆ ಆದ ನಂತರ ಸಮಿತಿಯು ನವೀಕರಿಸಲ್ಪಡಬೇಕು. ಹಿಂದಿನ ಸಮಿತಿಯೇ ಮುಂದುವರಿಯಬೇಕೆಂಬ ನಿಮ್ಮ ಅಭಿಪ್ರಾಯವು ಒಂದು ಕ್ರಾಂತಿಕಾರಿ ಪಕ್ಷಕ್ಕೆ ತಕ್ಕ ಅಭಿಪ್ರಾಯವಲ್ಲ. ಅದು ನೀವು ಒಂದು ಸಂತೋಷದ ಕುಟುಂಬ ಮಾತ್ರ ಎಂಬುದನ್ನು ಧೃಢಪಡಿಸುತ್ತದೆ" ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಆದರೆ ಅಲ್ಲಿ ಹಿಂದಿನ ಸಮಿತಿಯೇ ಮುಂದಿನ ಸಮಿತಿಯಾಗಿ ಮುಂದುವರಿಯಿತು.

ಪರಿಣಾಮ, ಪಾರ್ಟಿಯಲ್ಲಿ ಬಿಕ್ಕಟ್ಟು ತೀವ್ರವಾಗುತ್ತಾ ಹೋಗಿ 'ಕರ್ನಾಟಕ ರಾಜ್ಯದಲ್ಲಿ ಪಕ್ಷದ ಕೇಂದ್ರ ಸಮಿತಿಯ ತೀರ್ಮಾನಗಳೇ ಜಾರಿಯಾಗದ ಸ್ಥಿತಿ ಉಂಟಾಯಿತು' ಕೊನೆಗೆ ನೇತೃತ್ವದ ಪ್ರಮುಖ ಸ್ಥಾನಗಳಲ್ಲಿದ್ದ ಎಂ-.ಎಚ್.ಕೃಷ್ಣಪ್ಪ, ಕುಟ್ಟಪ್ಪ ಮತ್ತು ಎಚ್.ಎಸ್.ರಾಮರಾವ್ ಪಕ್ಷದಿಂದ ಉಚ್ಚಾಟನೆಯಾಗಬೇಕಾದ ಪರಿಸ್ಥಿತಿ ಉಂಟಾಯಿತು.

10ನೇ ಸಮ್ಮೇಳನವು ಬೆಂಗಳೂರಿನಲ್ಲಿ 1978ರಲ್ಲಿ ನಡೆದ ಸಂಧರ್ಭ ಮತ್ತು ಪರಿಸ್ಥಿತಿಯನ್ನು ನೆನಪಿಗೆ ತಂದುಕೊಂಡರೆ ಈಗಲೂ ನಡುಕ ಉಂಟಾಗುವುದು. ಆ ಮುಂದಾಳುಗಳು ಒಬ್ಬರು ಇನ್ನೊಬ್ಬರನ್ನು ಕಣ್ಣೆತ್ತಿ ನೋಡುತ್ತಿರಲಿಲ್ಲ. ಸಮ್ಮೇಳನದಲ್ಲಿ ಪಕ್ಷವು ಇಬ್ಭಾಗವಾಗುತ್ತಿತ್ತು. ಎಂ.ಎಚ್.ಕೃಷ್ಣಪ್ಪನವರು ಕೇವಲ ಒಂದು ಮತ ಅಧಿಕ ಪಡೆದು ಸೆಕ್ರೆಟರಿಯಾದರು. ಕೇಂದ್ರ ಸಮಿತಿಯ ಯಾವುದೇ ಸೂಚನೆಗೆ ಅವರು ಮತ್ತು ಅವರ ಅನುಯಾಯಿಗಳು ಬೆಂಬಲ ಕೊಡಲಿಲ್ಲ. ಇಡೀ ಪಕ್ಷದ ಸದಸ್ಯರೂ, ಕಾರ್ಯಕರ್ತರೂ ಹಾಗೂ ಪಕ್ಷದ ನೇತೃತ್ವದ ಸಾಮೂಹಿಕ ಸಂಘಟನೆಗಳ ಸದಸ್ಯರು ಎದ್ದು "ನಮಗೆ ಒಂದೇ ಕೇಂದ್ರ ಅದೇ ಕೇಂದ್ರಸಮಿತಿ. ನಾವು ಕೇಂದ್ರ ಸಮಿತಿಯ ನೇತೃತ್ವವನ್ನು ಮಾತ್ರ ಒಪ್ಪುವುದು ಇನ್ನೊಂದು ಅದಕ್ಕೆ ಸಮಾನಾಂತರವಾದ ಕೇಂದ್ರವನ್ನು ಒಪ್ಪುವುದಿಲ್ಲ "ಎಂದು ಸ್ಪಷ್ಟಪಡಿಸಿ ಧೃಢವಾಗಿ ಪಕ್ಷದ . ಕೇಂದ್ರ ಸಮಿತಿಯ ಜತೆ ನಿಂತರು. ಮರುಕಟ್ಟೇ ಮೂವರನ್ನೂ ಪಕ್ಷವು ಉಚ್ಚಾಟನೆ ಮಾಡಿತು.

ಆ ನಂತರ ಪಕ್ಷ ಬೆಳವಣಿಗೆ ಕುರಿತು ತನ್ನ ಸ್ಥಗಿತತೆ ಕಳೆದುಕೊಂಡಿತು. ವಿಸ್ತಾರಗೊಳ್ಳಲು ಆರಂಭವಾಯಿತು. ರಾಜ್ಯಾದಾದ್ಯಂತ ಹಲವು ಚಟುವಟಿಕೆಗಳು ನಡೆದವು.ರಾಜ್ಯದ ರಾಜಕೀಯದಲ್ಲಿ ಹಾಗೂ ಸಮಾಜದ ವಿವಿಧ ವಿಭಾಗಗಳಲ್ಲಿ ಪಕ್ಷವು ತನ್ನ ಪ್ರಭಾವ ಬೀರಲು ಹಾಗೂ ಅವರ ಮಧ್ಯೆ ಕೆಲಸ ಆರಂಭವಾಯಿತು. ಮಂಗಳೂರಿನಲ್ಲಿ ನಡೆದ 11ನೇ ಸಮ್ಮೇಳನದಲ್ಲಿ ಕಾಂ.ಎಂ.ಕೆ.ಭಟ್ಟರು ಕಾರ್ಯದರ್ಶಿಗಳಾದರು.

ದುರ್ದೈವಶಾತ್ ಆ ಸಮಯದಲ್ಲಿ ಎರಡು ಪ್ರವೃತ್ತಿಗಳು ಪಕ್ಷದಲ್ಲಿ ಬೆಳೆದು ಬಂದು ಪುನಃ ಕೇಂದ್ರ ಸಮಿತಿಯು ಪಕ್ಷದ ನೇತೃತ್ವದಲ್ಲಿ ಕುರಿತು ಟೀಕೆಮಾಡಿ ಕಾರ್ಯದರ್ಶಿಯನ್ನು ಬದಲು ಮಾಡಬೇಕಾದ ಪರಿಸ್ಥಿತಿ ಉಂಟಾಯಿತು. ಸಿ.ಪಿ.ಐ- ಸಿ.ಪಿ.ಐ(ಎಂ) ಜಂಟೀ ಸಭೆ ಮತ್ತು ಜಂಟಿ ರಾಜಕೀಯ ಹೇಳಿಕೆ, ಈ ಸಭೆಯು ಮತ್ತು ಅಲ್ಲಿ ಅಂಗೀಕೃತವಾದ ರಾಜಕೀಯ ಹೇಳಿಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ರಾಜಕೀಯ ಸಂಘಟನಾ ನಿಲುವುಗೇನೇ ವ್ಯತಿರಿಕ್ತವಾಗಿದ್ದು ಕೇಂದ್ರ ಸಮಿತಿಯು ಸ್ಪಷ್ಟವಾಗಿ ಇದು ತೀರಾ ಖಂಡನೀಯ ನಡವಳಿಕೆ ಎಂದು ಹೇಳಿಕೆಯನ್ನಿತ್ತು ಅವಶ್ಯವಾದ ಬದಲಾವಣೆಯನ್ನು ಮಾಡಿತು.


ಈ ಬದಲಾವಣೆಗೆ ಇನ್ನೊಂದು ಪ್ರಮುಖ ಕಾರಣವೂ ಇತ್ತು. ಅದು ಎಲ್ಲಾ ತರದ ಎಡ ಮುಖವಾಡ ಹಾಕಿಕೊಂಡಿರುವ ಶಕ್ತಿಗಳ ಮತ್ತು ವ್ಯಕ್ತಿಗಳ ಜತೆಗೂಡಿ ಕೆಲಸ ಮಾಡುವ ಪ್ರವೃತ್ತಿ ಕರ್ನಾಟಕದಲ್ಲಿ ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಎಡ ಕ್ರಿಶ್ಚಿಯನ್ ಶಕ್ತಿಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಒಳಗೆ ನುಸುಳಿ ಅದನ್ನು ಒಳಗಿಂದ ನಾಶಪಡಿಸಲು ಪ್ರಯತ್ನಿಸುತ್ತಿರುವುದರ ಬಗ್ಗೆ ಹಾಗೂ ರಾಜ್ಯದಲ್ಲಿ ಕಾರ್ಯಪ್ರವೃತ್ತರಾಗಿರುವ ಇತರ ವಿಚ್ಛಿದ್ರಕಾರಿ ಶಕ್ತಿಗಳ ಬಗ್ಗೆ ಪಕ್ಷ ಎಚ್ಚರಿಕೆಯನ್ನು ವಿಜಯವಾಡಾ

ನವೆಂಬರ್ 27, 1988ರ ಮುಂಜಾನೆ ಬೆಂಗಳೂರಿನ ಓಕಳಿ ಪುರಂದಲ್ಲಿಯವ ಸಿ.ಆರ್.ಎಸ್. ನಿಲಯದ ಪಕ್ಕದ ಮತ್ತು ಸುತ್ತ ಮುತ್ತಲಿನ ಪ್ರದೇಶ ಕಾಂ.ಪಿ.ರಾಮ ಮೂರ್ತಿ ನಗರವಾಗಿ ಮಾರ್ಪಟ್ಟಿತ್ತು. ಸಮ್ಮೇಳನದ ಸಿದ್ಧತೆಗಾಗಿ ಅವಿಶ್ರಾಂತ ದುಡಿದ ಸಂಗಾತಿಗಳ ಪ್ರಯತ್ನದ ಫಲವಾಗಿ, ಕೇವಲ ಹೆಸರಿನಲ್ಲಿ ಮಾತ್ರವಲ್ಲ, ವಾತಾವರಣದಲ್ಲೂ ಅದರ ಕಂಪು ವ್ಯಾಪಿಸಿತ್ತು. ಎದುರಿನ ದ್ವಿಚಕ್ರವಾಹನ ಸಂಚಾರದ ಮುಖ್ಯ ಬೀದಿಯ ಒಂದೆಡೆ ಸಮ್ಮೇಳನದ ಪ್ರತಿನಿಧಿಗಳಿಗೆ ಸ್ವಾಗತ ಕೋರುವ, ಸಮ್ಮೇಳನದ ಘೋಷಣೆಗಳನ್ನು ನೀಡುವ ದೊಡ್ಡ ಅಕ್ಷರಗಳ ಸುಂದರ ಗೋಡೆಬರಹಗಳು. ಇನ್ನೊಂದೆಡೆ ಗಾಳಿಯಲ್ಲಿ ಹಾರಾಡುವ 13 ಕೆಂಬಾವುಟಗಳೊಂದಿಗೆ ಮುಂಬರುವ ಕ್ರಾಂತಿಯ ಆದ್ಯಾರವನ್ನು ಸಾರುವ ಕುಡುಗೋಲು-ಸುತ್ತಿಗೆಯ ಬೃಹತ್ ಕಟೌಟ್. ಶಿಸ್ತಿನಿಂದ ಸಜ್ಜಾಗಿ ನಿಂತ ಕೆಂಪು ಸ್ವಯಂಸೇವಕರ ತುಕಡಿಗಳು. ಮೊತ್ತಮೊದಲ ಬಾರಿಗೆ ಒಂದು ಮಹಿಳಾ ಸ್ವಯಂಸೇವಕರ ತುಕಡಿ ಕೂಡಾ. ಪಕ್ಷ ಕರ್ನಾಟಕದಲ್ಲಿ ಈ ಅತೀಪ್ರಮುಖ ಜನವಿಭಾಗದಲ್ಲಿ ತನ್ನ ಪ್ರಭಾವ ಹರಡಲಾರಂಭಿಸಿರುವುದರ ಸಂಕೇತವಾಗಿತ್ತು.

ವಿಶ್ವದ ಇತಿಹಾಸದಲ್ಲಿ ಹೊಸ ಯುಗ ಆರಂಭಿಸಿದ ಕ್ರಾಂತಿ ಬಾವುಟಕ್ಕೆ ಧೀರ ನಮನ ನೀಡಲು, ಲಾಲ್‌ಸಲಾಂ ಅರ್ಪಿಸಲು ಸಜ್ಜಾಗಿ ನಿಂತ ಕೆಂಪು ಸ್ವಯಂಸೇವಕರು ಮತ್ತು ನೂರಾರು ಪಕ್ಷದ ಸದಸ್ಯರು ಹಾಗೂ ಬೆಂಬಲಿಗರ ಸಮ್ಮುಖ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಹಾಗೂ ರಾಜ್ಯದ ಹಿರಿಯ ಕಮ್ಯುನಿಸ್ಟ್ ಮುಖಂಡರಾದ ಕಾಂ.ಎನ್.ಕೆ.ಉಪಾಧ್ಯಾಯ ಧ್ವಜಾರೋಹಣ ನಡೆಸಿದರು.

ನಂತರ ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯುವ ಪುರಭವನದತ್ತ ಕೆಂಬಾವುಟ,ರಾಜ್ಯ ಮುಖಂಡರು, ಸ್ವಾಗತ





ಸಮಿತಿ ಪದಾಧಿಕಾರಿಗಳು ಮತ್ತು ಶಿಸ್ತಿನ ಕೆಂಪು ಸ್ವಯಂ ಸೇವಕದ ಹಿಂದೆ ನೂರಾರು ಮಂದಿ ತಾವೂ ವರ್ಗಪ್ರಜ್ಞೆಯ ಶಿಸ್ತಿನಿಂದ ದೇಶದ, ರಾಜ್ಯದ ರಾಜಕೀಯಕ್ಕೆ ಹೊಸ ಹುರುಪು, ಹೊಸ ತಿರುವು ನೀಡುವ ಘೋಷಣೆಗಳೊಂದಿಗೆ ನಗರದ ಹೃದಯಭಾಗವನ್ನು ಸುತ್ತಿ ಪುರಭವನ ತಲುಪಿದರು.

ಪುರಭವನ ಕೂಡಾ ಆದಾಗಲೇ ಕಾಂ.ಬಿ.ಟಿ.ಆರ್. ಸ್ವಾಗತಕ್ಕೆ ಸಿದ್ಧವಾಗಿ ನಿಂತಿತ್ತು. ಕೈಗಳಲ್ಲಿ ಹೂಗಳನ್ನು ಹಿಡಿದುನಿಂತ ಹಸುಳೆಗಳ ಹಿಂದೆ ಕೆಂಪು ಸ್ವಯಂಸೇವಕರು ಭಾರತದ ದುಡಿಮೆಗಾರರ ಕ್ರಾಂತಿಕಾರೀ ಪಕ್ಷದ ಅತ್ಯಂತ ಅನುಭವಿ ಮುಖಂಡ ಹಿರಿಯಮುತ್ಸದ್ದಿಗೆ ಧೀರ ಗೌರವಕ್ಕೆ ರಕ್ಷೆ ನೀಡಲು ಸಿದ್ಧರಾಗಿ ನಿಂತರು. ಮೊದಲು ಮಹಿಳಾ ತುಕಡಿ. ಸಮಾರಂಭಕ್ಕೆ ಆಗಮಿಸುತ್ತಿದ್ದಂತೆ ಸ್ವಾಗತಕ್ಕೆ ಸಿದ್ಧರಾಗಿನಿಂತ ಮಕ್ಕಳನ್ನು ಕಂಡ ಕಾಂ.ಬಿ.ಟಿ.ಆರ್. ಮುಖದಲ್ಲಿ ತುಂಬುನಗೆ. ಅರ್ಧಶತಮಾನಕ್ಕೂ ಹೆಚ್ಚು ಕಾಲ ಯಾವ ಕ್ರಾಂತಿಗಾಗಿ ಅವರು ಹಗಲು-ರಾತ್ರಿ ದುಡಿಯುತ್ತಾ ಈ ಇಳಿವಯಸ್ಸಿನಲ್ಲೂ ದೇಶಾದ್ಯಂತ ಸುತ್ತಾಡುತ್ತಾ ಬಂದಿರುವರೋ ಆ ಕ್ರಾಂತಿಯನ್ನು ಕಾಣಲಿರುವ ಪೀಳಿಗೆಯಿದು ಎಂದನಿಸಿರಬೇಕು.

ಕೆಂಪು ಸ್ವಯಂಸೇವಕರಿಂದ ಅತ್ಯಂತ ಉತ್ಸಾಹದಿಂದ ಗೌರವ ರಕ್ಷೆ ಸ್ವೀಕರಿಸಿ ಬಂದ ಕಾಂ.ಬಿ.ಟಿ.ಆರ್. ಪುರಭವನದ ಭವ್ಯ ಮೆಟ್ಟಿಲುಗಳಲ್ಲಿ ಪಾರಿವಾಳ ಹಾರಬಿಡುತ್ತಿದ್ದಂತೆ ಒಳಗೆ ಸಭಾಂಗಣದಿಂದ "ಜನಪದ ಸಂಗೀತ್" ತಂಡದ "ಕಾಮ್ರೇಡ್ ಲೆನಿನ್ ಕೊಟ್ಟಕರೆಗೆ" ಪ್ರತಿಧ್ವನಿಸಲಾರಂಭಿಸಿತು. ಈ ಹುರುಪು ತುಂಬುವ ಹಾಡು ಸಾಗುತ್ತಿದ್ದಂತೆ ಕಾಂ.ಬಿ.ಟಿ. ಆರ್. ಕಾಂ.ಪಿ.ರಾಮಚಂದ್ರರಾವ್, ಹಾಗೂ ಇತರ ರಾಜ್ಯ ಮುಖಂಡರು 13ನೇ ರಾಜ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ಕಾಂ.ಸೂರ್ಯನಾರಾಯಣ ರಾವ್ ಮತ್ತು ಇತರ ಪದಾಧಿಕಾರಿಗಳು ಕಲಾತ್ಮಕವಾಗಿ ಸಿಂಗರಿಸಲ್ಪಟ್ಟಿದ ವೇದಿಕೆಗೆ ಬಂದರು. ಹಾಡಿನ ತಂಡ ಇನ್ನೂ ಕೆಲವು ಜನಪರ ಗೀತೆಗಳನ್ನು ಹಾಡಿ ಉತ್ಸಾಹದ ವಾತಾವರಣದಲ್ಲಿ ಲಯ ತುಂಬಿತು.

ಕರ್ನಾಟಕದಲ್ಲಿ ಸಿ.ಪಿ.ಐ(ಎಂ)ನ ಆರಂಭ ದಿನಗಳಲ್ಲಿ ಅಮೂಲ್ಯವಾದ ಮಾರ್ಗದರ್ಶನ ನೀಡಿದ್ದ ಕಾಂ.ಪಿ. ರಾಮಮೂರ್ತಿಯವರನ್ನು ನೆನಪಿಸಿಕೊಳ್ಳಲಾಯಿತು. ಸ್ವಾಗತಸಮಿತಿ ಅಧ್ಯಕ್ಷ ಹಾಗೂ ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ.ಸೂರಿಯವರು ಸ್ವಾಗತ ಕೋರಿದರು.

ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೂ ಪ್ರಧಾನ ಕಾರ್ಯದರ್ಶಿ ಕಾಂ.ಇ.ಎಂ.ಎಸ್ ಮುತುವರ್ಜಿಯಿಂದ ಕಳುಹಿಸಿದ್ದ ಲಿಖಿತ ಹಾಗೂ ಧ್ವನಿ ಮುದ್ರಿತವಾಗಿ ಕಳುಹಿಸಿದ್ದ ಸಂದೇಶವನ್ನು ಓದಲಾಯಿತು.

ಕಾಂ.ಬಿ.ಟಿ.ಆರ್. ಸಮ್ಮೇಳನವನ್ನು ಉದ್ಘಾಟಿಸುತ್ತಾ ದೇಶದ ರಾಜಕೀಯ, ಸಾಮಾಜಿಕ, ಸ್ಥಿತಿಗತಿಗಳ ಒಂದು ಸ್ಥೂಲ ಸರ್ವೇಕ್ಷಣೆಯನ್ನೇ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಕಾಂ.ಪಿ.ರಾಮಚಂದ್ರರಾವ್ ರಾಜ್ಯ ಸಮ್ಮೇಳನ ಚರ್ಚಿಸಬೇಕೆಂದಿದ್ದ ಕೆಲವು ಪ್ರಮುಖ ವಿಷಯಗಳೇನೆಂದು ತಿಳಿಸಿದರು.

ಉದ್ಘಾಟನಾ ಸಮಾರಂಭದ ಅಂತಿಮ ಭಾಗವಾಗಿ ಒಂದುವಾರ ಕಾಲ ನಗರದ ವಿವಿದೆಡೆಗಳಲ್ಲಿ ಜನತೆಯ ಗಮನಸೆಳೆದ ದೇಶದಲ್ಲಿನ ಪ್ರಸ್ತುತ ಸನ್ನಿವೇಶ ಚಿತ್ರಿಸುವ ಸಣ್ಣ ಬೀದಿ ನಾಟಕದ ಪ್ರದರ್ಶನ ನಡೆಯಿತು.

ಕೈಗಾ ವಿರೋಧಿ ಚಳುವಳಿಯಸ್ವರೂಪವನ್ನು ಬಯಲಿಗೆಳೆಯಬೇಕು

ರಾಜ್ಯದಲ್ಲಿ ತೀವ್ರ ಚರ್ಚೆಯಲ್ಲಿರುವ ಕೈಗಾ ವಿರುದ್ಧವಾದ ಬಗ್ಗೆ ಸಮ್ಮೇಳನ ಅಂಗೀಕರಿಸಿದ ನಿರ್ಣಯ :

ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿತವಾಗಬೇಕೆಂದಿರುವ ಕೈಗಾ ಅಣು ಸ್ಥಾವರವನ್ನು ವಿರೋಧಿಸುವುದನ್ನು ನವೆಂಬರ್ 27ರಿಂದ 30 ರವರೆಗೆ ಬೆಂಗಳೂರಿನಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 13ನೇ ಕರ್ನಾಟಕ ರಾಜ್ಯ ಸಮ್ಮೇಳನವು ಖಂಡಿಸುತ್ತದೆ. ಕೈಗಾ ಅಣು ಸ್ಥಾವರವು ಅಣು ವಿರೋಧಿ ಕಾರ್ಯಕರ್ತರಿಂದ, ಸ್ವಯಂ ಸೇವಕ ಸಂಸ್ಥೆ ಮತ್ತು ಧಾರ್ಮಿಕ ಶಕ್ತಿಗಳ ತೀವ್ರ ವಿರೋಧವನ್ನು ಎದುರಿಸುತ್ತಿದೆ.

ವಿದ್ಯುಚ್ಛಕ್ತಿಯ ಕೊರತೆಯಿಂದ ನರಳುತ್ತಿರುವ ನಮ್ಮ ರಾಜ್ಯಕ್ಕೆ ಈ ಸ್ಥಾವರವು ಪೂರ್ತಿಯಾಗುವುದು ತೀವ್ರ ಅವಶ್ಯ ಇದೆ. ವಿದ್ಯುಚ್ಛಕ್ತಿಯ ತೀವ್ರ ಕೊರತೆಯಿಂದಾಗಿ ಹಲವು ಕಾರ್ಖಾನೆಗಳು ಈಗಾಗಲೇ ಲೇಆಫ್, ರಿಟ್ರೆಂಚ್‌ಮೆಂಟ್, ಇತ್ಯಾದಿಗಳಲ್ಲಿ ತೊಡಗಿವೆ. ಒಕ್ಕಲುತನ ಕೂಡ ವಿದ್ಯುಚ್ಛಕ್ತಿ ಕೊರತೆಯಿಂದ ಬಾಧಿತವಾಗಿದೆ.

ಅಭಿವೃದ್ಧಿ ಕಾರ್ಯಗಳನ್ನು ನಿಷ್ಫಲಗೊಳಿಸುವ ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ತೈಲವನ್ನಲ್ಲದೆ ಬೇರೆ ಶಕ್ತಿ ಮೂಲಗಳನ್ನು ತಡೆಗಟ್ಟುವ ಉದ್ದೇಶ ಹೊಂದಿರುವ ತೈಲ 'ಏಕಸ್ವಾಮ್ಯವಾದಿಗಳು ಈ ವಿರೋಧದ ಹಿಂದೆ ಇವೆ. ಅಣುಶಕ್ತಿಗೆ ಅಪರಿಮಿತವಾದ ಮೂಲಗಳಿವೆ. ಆದರೆ ಅಣು ಆಧಾರಿತ ಸೌರ್ಯ ಶಕ್ತಿ ಬಿಟ್ಟು ಕಲ್ಲಿದ್ದಲು, ತೈಲ ಇತ್ಯಾದಿ ಗಳಿಗೆ ಈ ಅವಕಾಶ ಇಲ್ಲ.

ಕೈಗಾ ಅಣು ಸ್ಥಾವರವನ್ನು ವಿರೋಧಿಸುತ್ತಿರುವವರು ಭೋಪಾಲ್ ಗ್ಯಾಸ್ ಘಟನೆ ಕುರಿತು ಯಾವ ವಿರೋಧವನ್ನು ವ್ಯಕ್ತಪಡಿಸಿಲ್ಲವೆಂಬುದನ್ನು ಗಮನಿಸಬೇಕಾಗಿದೆ. ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ವಿಜ್ಞಾನಿಗಳು ಮನದಟ್ಟಾಗುವಂತೆ ವಿವರಿಸಿದ್ದಾರೆ, ಮಾತ್ರವಲ್ಲ, ಈ ಅಣು ಸ್ಥಾವರಕ್ಕೆ ಬಹಳ ಕಡಿಮೆ ಅರಣ್ಯ ಪ್ರದೇಶ ಸಾಕೆಂಬುದನ್ನು ತಿಳಿಸಿದ್ದಾರೆ. ಆದರೆ ವಿಜ್ಞಾನಿಗಳು ಒದಗಿಸಿದ ವಿವರಣೆ ಬಗ್ಗೆ ಕೆಲವು ಬುದ್ಧಿಜೀವಿಗಳು ತತ್ವಶ: ಅವರ ಬುದ್ಧಿ ಮತ್ತೆಯನ್ನು ಉಪಯೋಗಿಸಿಲ್ಲ.

ಅಪಘಾತಗಳು ಸಂಭವಿಸಬಹುದು ಎನ್ನುವ ನೆಪದಲ್ಲಿ ಪ್ರಗತಿಯನ್ನು ತಡೆಗಟ್ಟುವುದು ಸರಿಯಲ್ಲ. ಆದರೆ ಸರಿಯಾದ ಮುಂಜಾಗ್ರತೆಗಳನ್ನು ತೆಗೆದುಕೊಳ್ಳುವ ಅಗತ್ಯ ಇದೆ. ಹಾಗೆಯೇ ತೊಂದರೆಗೆ ಒಳಪಟ್ಟ ಜನರಿಗೆ ಪುನರ್ವಸತಿ ಏರ್ಪಡಿಸಬೇಕಾಗಿದೆ.

ಕೈಗಾ ವಿರೋಧಿ ಚಳುವಳಿಯನ್ನು ಭಯಲಿಗೆಳೆಯಲು ಸಾರ್ವಜನಿಕರೂ ಮುಖ್ಯವಾಗಿ ಕಾರ್ಮಿಕ ವರ್ಗವು ಮಂಚೂಣಿ ಯಲ್ಲಿರಬೇಕೆಂದು ಈ ಸಮ್ಮೇಳನವು ಕರೆ ಕೊಡುತ್ತದೆ. ಪ್ರದೇಶದ ಹಾಗೆಯೇ ಇಡೀ ರಾಜ್ಯದ ಜನರಿಗೂ ತಿಳುವಳಿಕೆ ಮೂಡಿಸಲು ಪ್ರಚಾರ ಮಾಡಬೇಕೆಂದೂ ಮತ್ತು ಈ ದಿಸೆಯಲ್ಲಿ ಕೈಗಾ ಅಣುಸ್ಥಾವರ ಸ್ಥಾಪನೆಗೆ ಸಹಾಯವಾಗುವ ಶಕ್ತಿಗಳನ್ನು ಚುರುಕುಗೊಳಿಸಬೇಕೆಂದು ಸಮ್ಮೇಳನವು ಕರೆ ನೀಡುತ್ತದೆ.

ಇದಕ್ಕಾಗಿ ಡಿಸೆಂಬರ್ 20 ರಂದು ರಾಜ್ಯವ್ಯಾಪಿ ದಿನಾಚರಣೆ ನಡೆಸಬೇಕೆಂದೂ ಸಮ್ಮೇಳನ ಕರೆ ನೀಡಿದೆ.

ಟೆಂಡೂ ಎಲೆ ಒದಗಿಸಲು ಒತ್ತಾಯ

ಕರ್ನಾಟಕದಲ್ಲಿ ಬೀಡಿ ಕೈಗಾರಿಕೆಯಲ್ಲಿರುವ 5 ಲಕ್ಷ ಕೆಲಸಗಾರರ ಕೆಲಸಕ್ಕೆ ಯಾವ ರೀತಿಯಲ್ಲೂ ತೊಂದರೆಯಾಗದ ರೀತಿಯಲ್ಲಿ ಕರ್ನಾಟಕ ಸರಕಾರ ಮಧ್ಯಪ್ರದೇಶ ರಾಜ್ಯ ಸರ್ಕಾರಕ್ಕೂ, ಕೇಂದ್ರ ಸರ್ಕಾರಕ್ಕೂ ಸಾಕಷ್ಟು ಒತ್ತಡ ಬೀರಿಕರ್ನಾಟಕಕ್ಕೆ ಅವಶ್ಯವಾದ ವರ್ಷವೊಂದಕ್ಕೆ 15 ಲಕ್ಷ ಟೆಂಡೂ ಎಲೆ ಬಂಡಲ್‌ಗಳನ್ನು ಒದಗಿಸುವಂತೆ ಗ್ಯಾರಂಟಿ ಮಾಡಬೇಕೆಂದು ಸಮ್ಮೇಳನ ಒತ್ತಾಯಿಸಿದೆ.

ಆಧುನಿಕ ಮಾಂಸಾಹಾರಿ ಸಂಸ್ಕರಣ ವಿರೋಧಿಗಳಖಂಡನೆ

ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಲೆಳಸುತ್ತಿರುವ ಮಾಂಸಾಹಾರಿ ಸಂಸ್ಕರಣ ಕೇಂದ್ರದಿಂದ ಶುಚಿಯಾದ ಮಾಂಸಾಹಾರದ ಸರಬರಾಜಿನ ಯೋಜನೆಯ ವಿರುದ್ಧ ಕೋಮುವಾದಿ ಸಂಘಟನೆಗಳು/ಮಠಾಧಿಪತಿಗಳು ಹುಯಿಲೆಬ್ಬಿಸುತ್ತಿದ್ದಾರೆ. ಬಸವನಗುಡಿ ಬಂದ್ ಆಚರಿಸಿದ್ದಾರೆ. ಆರೆಸ್ಸೆಸ್ ಹಾಗೂ ಇತರ ಕೋಮುವಾದಿ, ಸಂಘಟನೆಗಳ ಈ ಪ್ರಯತ್ನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 13ನೇ ಸಮ್ಮೇಳನ ಖಂಡಿಸುತ್ತದೆ.

ಬಹುಸಂಖ್ಯಾತರು ಸೇವಿಸುವ ಹಾಗೂ ದಿನೇ ದಿನೇ ಹೆಚ್ಚು ಹೆಚ್ಚು ಸಂಖ್ಯೆಯ ಜನರು ಬಳಸಲಾರಂಭಿಸಿರುವ ಮಾಂಸಾಹಾರವನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸಬೇಕಾದದ್ದು ಆರೋಗ್ಯಕರವಾದ ರೋಗರಹಿತವಾದ ಆಹಾರವನ್ನು ಅಗತ್ಯವಾದ ಪ್ರಮಾಣದಲ್ಲಿ ಸರಬರಾಜು ಮಾಡಬೇಕಾದದ್ದು ಸರ್ಕಾರದ ಹೊಣೆ. ಈ ಹೊಣೆಯನ್ನು ನಿರ್ವಹಿಸುವಲ್ಲಿ ಹಿಂದೂ ಮೂಲ ಭೂತವಾದಿಗಳ ಯಾವುದೇ ಒತ್ತಡಕ್ಕೆ ಬಲಿಯಾಗಬಾರದೆಂದು ಸಮ್ಮೇಳನ ಎಚ್ಚರಿಸುತ್ತದೆ. ಹಾಗೂ ಯೋಜಿತ ರೀತಿಯಲ್ಲಿ ಆಧುನಿಕ ಮಾಂಸಾಹಾರಿ ಸಂಸ್ಕರಣಾಗಾರದ ನಿರ್ಮಾಣ ಕೈಗೊಳ್ಳಬೇಕೆಂದು ಒತ್ತಾಯಿಸುತ್ತದೆ.


ಮೂಲ ಭೂತವಾದಿಗಳ ಒತ್ತಡಕ್ಕೆ ಬಲಿಬಿದ್ದು ಈ ಯೋಜನೆಯನ್ನು ಕೈಬಿಡುವ ಯೋಚನೆ ಮಾಡಿದರೆ ಇಡೀ ರಾಜ್ಯದಲ್ಲಿ ತೀವ್ರವಾಗಿ ಚಳುವಳಿ ಮಾಡಬೇಕಾಗುತ್ತದೆಂದು 13ನೇ ಸಮ್ಮೇಳನ ಘೋಷಿಸುತ್ತದೆ.

ಕೈಗಾ ಸ್ಥಾಪನೆಗೆ ಒತ್ತಾಯಿಸಿ ಸಪ್ತಾಹ


1. ಸಿ.ಪಿ.ಐ(ಎಂ) 13ನೇ ಸಮ್ಮೇಳನದ ನಿರ್ಣಯದ ಮೇರೆಗೆ ಡಿಸೆಂಬರ್ 20ರಂದು ಕೈಗಾ ದಿನಾಚರಣೆಯ ಅಂಗವಾಗಿ ವಿಧಾನಸೌಧದ ಮುಂದೆ 'ಸಾಮೂಹಿಕ ಧರಣಿ' ಹಾಗೂ ಸಂಜೆ ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆ ಮತ್ತು ಕಬ್ಬನ್ ಪಾರ್ಕ್‌ನಲ್ಲಿ ಬಹಿರಂಗ ಸಭೆಯೊಂದನ್ನು ಸಹ 'ಏರ್ಪಡಿಸಲು ನಿರ್ಧರಿಸಲಾಗಿದೆ.

ಡಿಸೆಂಬರ್ 13 ರಿಂದ 20 ರವರೆಗೆ ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ನಗರದ ಬಡಾವಣೆಗಳಲ್ಲಿ ಸಾರ್ವಜನಿಕ ಸಭೆಗಳು ಹಾಗೂ ವಿಚಾರ ಗೋಷ್ಠಿಗಳನ್ನು ಏರ್ಪಡಿಸಲು ಉದ್ದೇಶಿಸಲಾಗಿದೆ. ಇದೇ ಸಂದರ್ಭದಲ್ಲಿ ಕೈಗಾ ಅಣು ಸ್ಥಾವರ ಸ್ಥಾಪನೆಯ ಅಗತ್ಯದ ಬಗ್ಗೆ ಜನ ಜಾಗೃತಿ ಮೂಡಿಸುವ ಸಲುವಾಗಿ ಕಿರುಹೊತ್ತಿಗೆಯೊಂದನ್ನು ಸಹ ಬಿಡುಗಡೆ ಮಾಡಲಾಗುವುದು.


2. ಬಿನ್ನಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ:- ಬಿನ್ನಿಮಿಲ್ ಕಾರ್ಖಾನೆಯ ಅಕ್ರಮ ಬೀಗಮುದ್ರೆಯನ್ನು ರಾಜ್ಯ ಸರ್ಕಾರವು ನಿಷೇಧಿಸಿದ್ದಾಗ್ಯೂ ಆಡಳಿತ ವರ್ಗವು ಕಾರ್ಖಾನೆಯನ್ನು ತೆರೆಯದೆ ಕಾರ್ಮಿಕರಿಗೆ ಅನಗತ್ಯ ಕಿರುಕುಳ ನೀಡುತ್ತಿರುವುದನ್ನು ಸಿ.ಪಿ.ಐ(ಎಂ) ಜಿಲ್ಲಾ ಸಮಿತಿಯು ತೀವ್ರವಾಗಿ ಖಂಡಿಸಿದೆ. ಕಾರ್ಖಾನೆಯನ್ನು ಮುಚ್ಚುವ ಬೆದರಿಕೆಯನ್ನೊಡ್ಡಿ ಕಾರ್ಮಿಕರ ಹಿತಾಸಕ್ತಿಗಳಿಗೆ ಪ್ರತಿಕೂಲವಾದ ಒಪ್ಪಂದವನ್ನು ಹೇರಲು ಪ್ರಯತ್ನಿಸುತ್ತಿರುವ ಆಡಳಿತ ವರ್ಗದ ಕುತಂತ್ರವನ್ನು ಐಕ್ಯ ಹೋರಾಟದ ಮೂಲಕ ಹಿಮ್ಮೆಟ್ಟಿಸಬೇಕೆಂದು ಪಕ್ಷವು ಕರೆ ನೀಡಿದ್ದು ಬಿನ್ನಿ ಕಾರ್ಮಿಕರ ಹೋರಾಟಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತದೆ. ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿಯನ್ನು ಹಿಂತೆಗೆದುಕೊಳ್ಳುವಂತೆ ಸರ್ಕಾರವು ಒತ್ತಡ ತರಬೇಕೆಂದು ಹಾಗೂ ಕಾರ್ಮಿಕರ ಚಳುವಳಿಯ ವಿರುದ್ಧ ಪೊಲೀಸ್ ಯಂತ್ರದ ದುರುಪಯೋಗವನ್ನು ತಡೆಹಿಡಿಯಬೇಕೆಂದು ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಸಮಿತಿಯು, ಈ ಮೂಲಕ ಆಗ್ರಹ ಪಡಿಸಿದೆ.



ಕಾಂ.ಎಸ್.ಸೂರ್ಯನಾರಾಯಣರಾವ್




ಪ್ರಥಮ ರಾಜ್ಯ ಸಮಿತಿ ಸಭೆ




ಎನ್.ಕೆ.ಉಪಾಧ್ಯಾಯ


ರಾಜ್ಯ ಸಮಿತಿ ಪದಾಧಿಕಾರಿಗಳು



ಪಿ.ರಾಮಚಂದ್ರರಾವ್
ರಾಜ್ಯ ಕಾರ್ಯದರ್ಶಿ




ವಿ.ಜೆ.ಕೆ.ನಾಯರ್




ಸಿ.ನಂಜುಂಡಪ್ಪ





ಜಿ.ವಿ.ಶ್ರೀರಾಮರೆಡ್ಡಿ



ಕೆ.ಆರ್.ಶ್ರೀಯಾನ್

ವೀಕ್ಷಕರು




ಚಂದ್ರಶೇಖರ ಬಾಳಿ



ಟಿ.ಎಸ್. ಮಣಿ

ಪ್ರತಿನಿಧಿಗಳು



ಹರಿಣಿ ಕಣ್ಣೇರಿ


ಸಿ.ಪಿ.ಐ(ಎಂ), ಎಡಪಕ್ಷಗಳು ಸ್ವತಂತ್ರ ರಾಷ್ಟ್ರೀಯ ಶಕ್ತಿಯಾಗಿ ಮೂಡಿ ಬಂದಿವೆ

—ಇ.ಎಂ.ಎಸ್

ಸಿ.ಪಿ.ಐ(ಎಂ)ನ ಹನ್ನೆರಡನೇ ಮಹಾಧಿವೇಶನದ ನಂತರದ ಮೂರು ವರ್ಷಗಳಲ್ಲಿ ಎಡಪಕ್ಷಗಳು, ಮುಖ್ಯವಾಗಿ ಸಿ.ಪಿ.ಐ(ಎಂ) ದೇಶದ ರಾಜಕೀಯದಲ್ಲಿ ಸ್ವತಂತ್ರ ರಾಷ್ಟ್ರೀಯ ಶಕ್ತಿಯಾಗಿ ಮೂಡಿಬಂದಿವೆ ಎಂದು ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ.ಇ.ಎಂ.ಎಸ್. ನಂಬೂದಿರಿಪ್ಪಾಡ್ 13ನೇ ಕರ್ನಾಟಕ ರಾಜ್ಯ ಸಮ್ಮೇಳನಕ್ಕೆ ನೀಡಿದ ಸಂದೇಶದಲ್ಲಿ ಹೇಳಿದ್ದಾರೆ.

ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿ ಮಾರ್ಗದರ್ಶನ ನೀಡಬೇಕಾಗಿದ್ದ ಇ.ಎಂ.ಎಸ್ ಮಹಾಧಿವೇಶನದ ಸಿದ್ಧತೆಯ ಕೆಲಸಗಳ ಒತ್ತಡದಿಂದಾಗಿ ಬೆಂಗಳೂರಿಗೆ ಬರಲು ಆಗಿರಲಿಲ್ಲ. ಈ ಬಗ್ಗೆ ಉಂಟಾದ ನಿರಾಸೆಯಲ್ಲಿ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳೊಂದಿಗೆ ತಾನೂ ಭಾಗಿಯೆಂದು ಸಂದೇಶದ ಆರಂಭದಲ್ಲಿ ಅವರು ತಿಳಿಸಿದ್ದಾರೆ.

ಸಿ.ಪಿ.ಐ(ಎಂ)ನ ಹನ್ನೆರಡನೇ ಮಹಾಧಿವೇಶನ, ಅದಕ್ಕೆ ಪೂರ್ವಭಾವಿಯಾಗಿ ನಡೆದ ರಾಜ್ಯಸಮ್ಮೇಳನಗಳ ನಂತರದ ಮೂರು ವರ್ಷಗಳು ಎಲ್ಲಾ ರಂಗಗಳಲ್ಲೂ ಜಾಗತಿಕ ರಾಜಕೀಯದಲ್ಲಿ, ಕಮ್ಯುನಿಸ್ಟ್ ಮತ್ತು ಕಾರ್ಮಿಕ. ಪಕ್ಷಗಳ ಪರಸ್ಪರ ಸಂಬಂಧಗಳಲ್ಲಿ, ಭಾರತದ ರಾಜಕೀಯದಲ್ಲಿ, ಕರ್ನಾಟಕವೂ ಸೇರಿದಂತೆ ಪ್ರತಿಯೊಂದು ರಾಜ್ಯದ ರಾಜಕೀಯ ಬೆಳವಣಿಗೆಯಲ್ಲಿ ಒಂದು ಯುಗಾಂತರಕಾರೀ ಘಟ್ಟ ಎಂದು ವರ್ಣಿಸಿದ ಇ.ಎಂ.ಎಸ್. ಕರ್ನಾಟಕ ರಾಜ್ಯ ಸಮ್ಮೇಳನದ ಕಲಾಪಗಳ ಮೂಲಕ ಈ ಬಗ್ಗೆ ಆಳವಾದ ಅಧ್ಯಯನ ನಡೆದು 13ನೇ ಮಹಾಧಿವೇಶನಕ್ಕೆ ಮುನ್ನ ನಡೆಯುವ ರಾಷ್ಟ್ರೀಯ ವಿಚಾರ ವಿನಿಮಯದಲ್ಲಿ



ಇಲ್ಲಿನ ಸಂಗಾತಿಗಳು ಅರ್ಥಪೂರ್ಣವಾಗಿ ಭಾಗವಹಿಸಲು ಸಾಧ್ಯವಾಗುತ್ತದೆಂದು ಆಶಿಸಿದರು.

ವಿಶ್ವ ರಾಜಕೀಯದಲ್ಲಿ

ಕಳೆದ ಮೂರು ವರ್ಷಗಳ ಬೆಳವಣಿಗೆಗಳನ್ನು ಪರಿಶೀಲಿಸುತ್ತಾ ಇ.ಎಂ.ಎಸ್. ವಿಶ್ವ ರಾಜಕೀಯದ ಎರಡು ಪ್ರಮುಖ ಬೆಳವಣಿಗೆಗಳನ್ನು ಗುರುತಿಸಿದರು. ಮೊದಲನೆಯದು ಪರಮಾಣು ನಿಶ್ಶಸ್ತ್ರೀಕರಣದತ್ತ ಸಣ್ಣದಾದರೂ ಮಹತ್ವಪೂರ್ಣ ಹೆಜ್ಜೆ. ಎರಡನೇಯದು ಸಮಾಜವಾದೀ ದೇಶಗಳಲ್ಲಿ ಸಮಾಜವಾದವನ್ನು ಇನ್ನಷ್ಟು ದಕ್ಷಗೊಳಿಸಲು ನಡೆಯುತ್ತಿರುವ ಸ್ವವಿಮರ್ಶೆ.

ಪರಮಾಣು ನಿಶ್ಶಸ್ತ್ರೀಕರಣ ಕುರಿತಾದ ಗೊರ್ಬಚೆವ್-ರೇಗನ್ ಒಪ್ಪಂದ ಪರಮಾಣು ಶಸ್ತ್ರಾಗಾರದ ಕೇವಲ 5 % ವನ್ನಷ್ಟೇ ತಟ್ಟಿದರೂ ವಿಶ್ವಶಾಂತಿ ಚಳುವಳಿಯ(ಇದರಲ್ಲಿ ಸಮಾಜವಾದೀ ದೇಶಗಳು ಮುಂಚೂಣಿಯಲ್ಲಿವೆ) ದೃಢ ಪ್ರಯತ್ನದಿಂದ ಹೇಗೆ ಸಾಮ್ರಾಜ್ಯಶಾಹೀ ಶಕ್ತಿಗಳ ಮೇಲೆ ಒತ್ತಡತ ತರಲು ಸಾಧ್ಯವೆಂಬುದನ್ನು ಇದು ತೋರಿಸಿಕೊಟ್ಟಿದೆ. ಎಲ್ಲಾ ದೇಶಗಳ ಸದಭಿಪ್ರಾಯದ ಜನರ ನೆರವಿನಿಂದ ಇದು ಸಾಧ್ಯವಾಗಿದೆ. ಆದರೂ ಕರಾಳ ಯುದ್ಧಕೋರ ಶಕ್ತಿಗಳು ತಮ್ಮ ಪ್ರಯತ್ನ ನಿಲ್ಲಿಸಿಲ್ಲ. ಆದ್ದರಿಂದ ವಿಶ್ವಶಾಂತಿ ಪರ ಶಕ್ತಿಗಳು ತಮ್ಮ ಹೋರಾಟವನ್ನು ದೃಢಗೊಳಿಸಬೇಕು. ನಮ್ಮ ಪಕ್ಷ ಭಾರತದಲ್ಲಿ ಮತ್ತು ಇತರ ಅಭಿವೃದ್ಧಿ ಶೀಲ ದೇಶಗಳಲ್ಲಿ ಶಾಂತಿ ಚಳುವಳಿಯನ್ನು ಬಲಗೊಳಿಸುವುದರ ಬಗ್ಗೆ ಹೇಳುತ್ತಲೇ ಬಂದಿದೆ. ಕಳೆದ ಮೂರು ವರ್ಷಗಳಲ್ಲಿ ಈ ಬಗ್ಗೆ ಸಾಕಷ್ಟು ಪ್ರಯತ್ನ ನಡೆದಿದೆ. ಆದರೂ ನಾವು ಮಾಡಬೇಕಾಗಿರುವಷ್ಟು, ನಮಗೆ ಸಾಧ್ಯವಿರುವಷ್ಟು ಮಾಡಿದ್ದೇವೆ ಎಂದು ಹೇಳಲು ಸಾಧ್ಯವಿಲ್ಲ. ರಾಜ್ಯಸಮೇಳನ ಈ ನಿಟ್ಟಿನಲ್ಲಿ ನಮ್ಮ ದೌರ್ಬಲ್ಯ ನೀಗುವ ಬಗ್ಗೆ ಚರ್ಚಿಸಬೇಕು ಎಂದು ಇ.ಎಂ.ಎಸ್ ಸಲಹೆ ಮಾಡಿದರು.

ಎರಡನೇ ಅಂಶದ ಬಗ್ಗೆ ಮಾತನಾಡುತ್ತಾ, ತ್ವರಿತ ಸಮಾಜವಾದಿ ಅಭಿವೃದ್ಧಿ ಸಾಧಿಸಿದ ನಂತರ ಇತ್ತೀಚೆಗೆ ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ರಾಂತಿಯ ಈ ಯುಗದಲ್ಲಿ ಸಮಾಜವಾದಿ ದೇಶಗಳು ಕೆಲವು ಮುಂದುವರಿದ ಬಂಡವಾಳಶಾಹಿ ದೇಶಗಳಿಗಿಂತಲೂ ಹಿಂದೆ ಬಿದ್ದಿವೆ ಎಂದು ಮರೆಮಾಚದ ಸಮಾಜವಾದಿ ದೇಶಗಳ ಮುಖಂಡತ್ವ ಈ ನ್ಯೂನತೆ ಪರಿಹರಿಸಲು ಸೋವಿಯತ್ ಪಕ್ಷದ 27ನೇ ಮಹಾಧಿವೇಶನ, ಚೀಣಾ ಪಕ್ಷದ 13ನೇ ಮಹಾಧಿವೇಶನಗಳು ವಿವರವಾದ ಚರ್ಚೆ ನಡೆಸಿವೆ ಎಂದು ಇ.ಎಂ.ಎಸ್ ನುಡಿದರು. ಈ ಚರ್ಚೆಗಳ ಆಧಾರದ ಮೇಲೆ ಅಲ್ಲಿ ಕೆಲವು ಆರ್ಥಿಕ, ರಾಜಕೀಯ, ಆಡಳಿತಾತ್ಮಕ ಮತ್ತು ಸಾಮಾಜಿಕ ಸಾಂಸ್ಕೃತಿಕ ಸಂಘಟನೆಗಳ ಪುನರ್ರಚನೆಯ ಕ್ರಮ ಕೈಗೊಳ್ಳಲಾಗಿದೆ. ಈ ಎಲ್ಲಾ ಹೊಸ ಕ್ರಮಗಳು ಸಂಘಟನೆಯ ವಿಧಾನಗಳು ವಿಶ್ವದ ಎಲ್ಲಾ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳಿಗೆ ತಕ್ಷಣವೇ ಅರ್ಥವಾಗಲಿಕ್ಕಿಲ್ಲ. ಆದರೆ ಇವು ಬಂಡವಾಳಶಾಹೀ ಮಾಧ್ಯಮಗಳು ಪ್ರಚಾರ ಮಾಡುವಂತೆ ಸಮಾಜವಾದದಿಂದ ಹಿಂದೆ ಸರಿಯುವ ಕ್ರಮಗಳಾಗಿರದೆ ಸಮಾಜವಾದವನ್ನು ಇನ್ನಷ್ಟು ದಕ್ಷಗೊಳಿಸುವ ಕ್ರಮಗಳು ಕಾರ್ಮಿಕವರ್ಗದ ಅಂತರಾಷ್ಟ್ರೀಯ ವಿಚಾರಹೊಂದಿದ ನಾವು ಖಂಡಿತವಾಗಿಯೂ ಈ ಎಲ್ಲಾ ಕ್ರಮಗಳು ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಅನುಗುಣವಾಗಿಯೇ ಎಂದು ವಿಮರ್ಶಿಸುವುದರ ಜತೆಗೇ ಈ ದೇಶಗಳಲ್ಲಿನ ಸಂಗಾತಿಗಳಿಗೆ ಅವರ ಪ್ರಯತ್ನಗಳಲ್ಲಿ ಯಶಸ್ಸು ಕೋರುತ್ತೇವೆ ಎಂದು ಅವರು ನುಡಿದರು.

ಕಾರ್ಮಿಕ ವರ್ಗದ ಅಂತರಾಷ್ಟ್ರೀಯತೆಗೆ ಬದ್ಧವಾದ ನಮಗೆ ಸಂತಸ ತಂದಿರುವ ಇನ್ನೊಂದು ಸಂಗತಿಯೆಂದರೆ ಸುಮಾರು ಕಾಲುಶತಮಾನದ ಭಿನ್ನಾಭಿಪ್ರಾಯಗಳ ನಂತರ ಕಮ್ಯುನಿಸ್ಟ್ ಆಂದೋಲನ ಮತ್ತೆ ಐಕ್ಯ ಕಾರ್ಯಾಚರಣೆಯ ಮಾರ್ಗದಲ್ಲಿ ನಡೆಯಲಾರಂಭಿಸಿದೆ. ಎರಡು ದೊಡ್ಡಪಕ್ಷಗಳಾದ ಸೋವಿಯತ್ ಮತ್ತು ಚೀಣಾ ಪಕ್ಷಗಳ ನಡುವಿನ ಸಂಬಂದಗಳಲ್ಲಿ ಸುಧಾರಣೆಯಾಗುತ್ತಿದೆ. ಸಮಾನತೆ, ಮುಕ್ತ ಅಭಿಪ್ರಾಯ ವಿನಿಮಯ ಭದ್ರ ಅಡಿಗಲ್ಲಿನ ಮೇಲೆ ಐಕ್ಯ ಕಾರ್ಯಾಚರಣೆಯ ಈ ಹೊಸ ಸನ್ನಿವೇಶವನ್ನು (ಇದರಲ್ಲಿ ಸಿ.ಪಿ.ಐ(ಎಂ) ಪಾತ್ರ ಕೂಡಾ ಇದೆ) ರಾಜ್ಯ ಸಮ್ಮೇಳನದ ಕಲಾಪಗಳಲ್ಲಿ ಗಮನಿಸಬೇಕು ಎಂದು ಇ.ಎಂ.ಎಸ್ ತಮ್ಮ ಸಂದೇಶದಲ್ಲಿ ಸಲಹೆ ನೀಡಿದರು.

ಐಕ್ಯರಂಗ

ದೇಶದ ರಾಜಕೀಯದಲ್ಲಿ ಪರಿವರ್ತನೆ

ರಾಷ್ಟ್ರೀಯ ಬೆಳವಣಿಗೆಗಳನ್ನು ಚರ್ಚಿಸುತ್ತಾ, ಎಡಶಕ್ತಿಗಳು ಒಂದು ಸ್ವತಂತ್ರ ರಾಷ್ಟ್ರೀಯ ಶಕ್ತಿಯಾಗಿ ಮೂಡಿ ಬಂದಿವೆಯೆಂದ ಇ.ಎಂ.ಎಸ್ ಕಾಂಗ್ರೆಸ್(ಐ)ನ್ನು ಅಧಿಕಾರದಿಂದಿಳಿಸಿ ಎಡ, ಜಾತ್ಯತೀತ, ಪ್ರಜಾಪ್ರಭುತ್ವ ಶಕ್ತಿಗಳ ಕೂಟ ಅಧಿಕಾರಕ್ಕೆ ಬರುವಂತೆ ಮಾಡುವ ಹೋರಾಟದಲ್ಲಿ ಒಂದು ಕನಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ಕಾಂಗ್ರೆಸ್(ಐ)ನ್ನು ಸೋಲಿಸಲು ಮತ್ತು ಬಿ.ಜೆ.ಪಿ ಸೇರಿದಂತೆ ಎಲ್ಲಾ ವಿಭಜನಕಾರೀ ಶಕ್ತಿಗಳನ್ನು ದೂರಗೊಳಿಸಲು ಸಿದ್ಧವಿರುವ ಎಲ್ಲಾ ಪಕ್ಷಗಳೊಂದಿಗೆ ನಾವು ಸಹಕರಿಸುತ್ತೇವೆ ಎಂದು ನುಡಿದರು. ಅಲಿಪ್ತ ನೀತಿ ಮತ್ತು ಶಾಂತಿಯ ವಿದೇಶಾಂಗ ನೀತಿಯನ್ನು ಮತ್ತಷ್ಟು ಬಲಪಡಿಸಲು ಕಾಂಗ್ರೆಸ್(ಐ)ನ ಜನ ವಿರೋಧಿ, ಗುತ್ತೇದಾರಿ ಪರ, ಪಾಳೆಯಗಾರೀ ಪರ, ನೀತಿಗಳನ್ನು ಸಂಪೂರ್ಣ ತ್ಯಜಿಸಲು ಬದ್ಧವಾದ, ಕಾಂಗ್ರೆಸ್(ಐ) ಮಾತ್ರವಲ್ಲ ಇತರ ವಿಭಜನಕಾರೀ ಶಕ್ತಿಗಳನ್ನೂ ಹಿಮ್ಮೆಟ್ಟಿಸುವ, ದುಡಿಯುವ ಜನಗಳಿಗೆ ಗರಿಷ್ಠ ರಕ್ಷಣೆ ಕೊಡುವ ಒಂದು ಸರಕಾರದ ಸ್ಥಾಪನೆಗಾಗಿ ನಾವು ಹೋರಾಡುತ್ತಿದ್ದೇವೆ. ಇತ್ತೀಚಿನ ಚುನಾವಣಾ ವಿಜಯಗಳು, ಪಶ್ಚಿಮ ಬಂಗಾಳ ಮತ್ತು ತ್ರಿಪುರದ ಎಡರಂಗ ಸರ್ಕಾರಗಳ ಹಾಗೂ ಕೇರಳದ ಎಲ್.ಡಿ.ಎಫ್. ಸರಕಾರದ ಉತ್ತಮ ಕೆಲಸದ ದಾಖಲೆ ಜನರ ಅಸಂತೃಪ್ತಿಯನ್ನು ಎಡ ಮತ್ತು ಪ್ರಜಾಸತ್ತಾತ್ಮಕ ಮಾರ್ಗದತ್ತ ಹರಿಸಲು ಸಾಧ್ಯವೆಂಬ ಭರವಸೆ ನೀಡುವ ಅಂಶಗಳು ಎಂದರು ಇ.ಎಂ.ಎಸ್.

ಜನತಾ ಪಕ್ಷದ ಮತ್ತು ಸರಕಾರದ ನೇತೃತ್ವದಲ್ಲಿ ಕರ್ನಾಟಕದ ಜನತೆ ಕೂಡಾ ರಾಷ್ಟ್ರದ ರಾಜಕೀಯ ಪರಿವರ್ತನೆಯಲ್ಲಿ ಮುಖ್ಯ ಪಾತ್ರವಹಿಸಿದ್ದಾರೆ ಎಂದು ಮುಂದುವರಿದು ಹೇಳಿದ ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿಗಳು ಇದರಲ್ಲಿ ರಾಜ್ಯದ ನಮ್ಮ ದುರ್ಬಲ ಮತ್ತು ಸಣ ಘಟಕ ತನ್ನ ಪಾತ್ರವಹಿಸಿದೆ ಎಂದರು.

13ನೇ ಸಮ್ಮೇಳನ ಈ ನಿಟ್ಟಿನಲ್ಲಿ ಪಕ್ಷದ ಮತ್ತು ಪಕ್ಷದ ಮಿತ್ರರ ಕಾರ್ಯನಿರ್ವಹಣೆಯ ವಿಮರ್ಶೆ ನಡೆಸಿ ಅದನ್ನು ಮತ್ತಷ್ಟು ಗಟ್ಟಿಗೊಳಿಸುವ ಬಗ್ಗೆ ಚರ್ಚಿಸಬೇಕು ಎಂದು ಇ.ಎಂ.ಎಸ್ ತಮ್ಮ ಸಂದೇಶದಲ್ಲಿ ಸಲಹೆ ನೀಡಿದರು.

13 ನೇ ಸಮ್ಮೇಳನದ ಪ್ರತಿನಿಧಿಗಳು

13 ನೇ ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸಿದ ಸಂಗಾತಿಗಳ ಅರ್ಹತಾ ಪರಿಶೀಲನಾ ವಿವರ ಹೀಗಿದೆ.

ಮಂಡ್ಯ ಒಂದು ಜಿಲ್ಲೆಯನ್ನು ಬಿಟ್ಟು ಉಳಿದೆಲ್ಲಾ ಜಿಲ್ಲೆಗಳಿಂದ ಒಟ್ಟು 273 ಸಂಗಾತಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ 246 ಪ್ರತಿನಿಧಿಗಳು, 27 ವೀಕ್ಷಕರು; ಮಹಿಳಾ ಸಂಗಾತಿಗಳ ಸಂಖ್ಯೆ 10; ಪೂರ್ಣ ಕಾಲದ ಕಾರ್ಯಕರ್ತರ ಸಂಖ್ಯೆ 75 .

ಈ ಸಂಗಾತಿಗಳಲ್ಲಿ 18 ರಾಜ್ಯ ಸಮಿತಿ ಸದಸ್ಯರು, 78 ಜಿಲ್ಲಾ ಸಮಿತಿಗಳ ಸದಸ್ಯರು, 31 ಪ್ರಾದೇಶಿಕ ಸಮಿತಿಗಳ ಸದಸ್ಯರು, 36 ತಾಲ್ಲೂಕು ಸಮಿತಿಗಳ ಸದಸ್ಯರು, 43 ಶಾಖಾ ಕಾರ್ಯದರ್ಶಿಗಳು ಹಾಗೂ 67 ಸಾಮಾನ್ಯ ಸದಸ್ಯರು.

ವಿದ್ಯಾಭ್ಯಾಸ: ಪ್ರಾಥಮಿಕ 55: ಮಾಧ್ಯಮಿಕ 40; ಮೆಟ್ರಿಕ್ 42; ಇಂಟರ್ 37; ಪದವೀಧರರು 68; ಉನ್ನತ ಪದವೀದರರು 24; ಡಿಪ್ಲೋಮೊ 4; ವಿದ್ಯಾಭ್ಯಾಸವಿಲ್ಲದವರು 3.

ವರ್ಗ ಹಿನ್ನೆಲೆ : ಕಾರ್ಮಿಕ ವರ್ಗ 117.ಕೃಷಿ ಕೂಲಿಗಾರ 14; ಬಡರೈತ;34;ಮಧ್ಯಮ ರೈತ-56' ಶ್ರೀಮಂತ ರೈತ:1 ಭೂಮಾಲಿಕ:2, ಮಧ್ಯಮ ವರ್ಗ 49.

ಈಗ ಕೆಲಸ ಮಾಡುತ್ತಿರುವ ರಂಗ: ಪಕ್ಷದ ಸಂಘಟನೆಯಲ್ಲಿ 12; ಕಾರ್ಮಿಕ ಸಂಘಟನೆಗಳಲ್ಲಿ 132; ಕಿಸಾನ್ ರಂಗ- 68; ಕೃಷಿ ಕೂಲಿಗಾರ ಸಂಘಟನೆ -9; ಯುವರಂಗ-21; ವಿದ್ಯಾರ್ಥಿರಂಗ-10: ಮಹಿಳಾರಂಗ-5 : ಸಾಂಸ್ಕೃತಿಕ ರಂಗ-10.

ವಯೋಗುಂಪು: 20 ವರ್ಷಕ್ಕಿಂತ ಕಡಿಮೆ-1: 21ರಿಂದ 30 ವರ್ಷ-79; 31ರಿಂದ 40 ವರ್ಷ-107; 41ರಿಂದ 50 ವರ್ಷ-52, 51ರಿಂದ 60 ವರ್ಷ-32; 61 ರಿಂದ 70 ವರ್ಷ-11; 71 ರಿಂದ 80 ವರ್ಷ-1.

ಪಕ್ಷಕ್ಕೆ ಸೇರಿದ ವರ್ಷ: 1942 ರ ಮೊದಲು-1; 1942 ರಿಂದ 1947-6; 1947-1964-34; 1964-1970-27; 1970-1977 -66; 1977-1987 -137 ಮತ್ತು 1987ರ ನಂತರ -2.

ಆದಾಯ ಗುಂಪು: ಮಾಸಿಕ 500 ರೂಗಿಂತ ಕಡಿಮೆ-103; ರೂ.500 ರಿಂದ 1000-49; ರೂ.1000 ರಿಂದ-1500-30; ರೂ.1501 ರಿಂದ 2000-16; ರೂ 2000 ಕ್ಕಿಂತ ಹೆಚ್ಚು -18; ಆದಾಯವಿಲ್ಲದವರು ಮತ್ತು ಇತರರು-57

ಈ ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿನಿಧಿಗಳಲ್ಲಿ ಇಬ್ಬರು ಶಾಸಕರು, 4 ಕಾರ್ಪೊರೇಟರುಗಳು, 4 ನಗರ ಸಭಾ ಸದಸ್ಯರು, ಒಬ್ಬರು ಜಿಲ್ಲಾ ಪರಿಷತ್ ಸದಸ್ಯರು, ಮಂಡಳ ಪಂಚಾಯತ್ ಸದಸ್ಯರು, 7 ಪಂಚಾಯತ್ ಸಮಿತಿ ಸದಸ್ಯರು ಮತ್ತು ಇತರೇ ಸಹಕಾರಿ ಸಂಸ್ಥೆಗಳ 12 ಚುನಾಯಿತ ಸದಸ್ಯರು.

ಒಟ್ಟು 68 ಸಂಗಾತಿಗಳು ವಿವಿಧ ಅವಧಿಯ ಜೈಲುವಾಸದ ಅನುಭವ ಹೊಂದಿದವರು. ಒಂದು ವರ್ಷಕ್ಕಿಂತ ಹೆಚ್ಚು ಜೈಲುವಾಸ ಅನುಭವಿಸಿದ ಸಂಗಾತಿಗಳ ಸಂಖ್ಯೆ10; ಕಾಂ.ಎನ್.ಕೆ.ಉಪಾಧ್ಯಾಯ ಅತಿ ಹೆಚ್ಚು, ಎಂದರೆ 6ವರ್ಷ 4ತಿಂಗಳು ಸೆರೆವಾಸ ಅನುಭವಿಸಿದವರು. ಅತ್ಯಂತ ದೀರ್ಘಕಾಲ ಭೂಗತ ಜೀವನ ನಡೆಸಿದವರು 4 ವರ್ಷ 6 ತಿಂಗಳು ಭೂಗತರಾಗಿದ್ದ ಕಾಂ.ಸೂರ್ಯ ನಾರಾಯಣರಾವ್.

ಐಕ್ಯತೆಯ ವಾತಾವರಣದಲ್ಲಿ ಹೊಸ ಉತ್ಸಾಹ ಮೂಡಿಸಿದ ಹದಿಮೂರನೇ ರಾಜ್ಯ ಸಮ್ಮೇಳನ

ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳ ಬೆಳವಣಿಗೆಗಳ, ಚಟುವಟಿಕೆಗಳ ವಿಮರ್ಶೆ ನಡೆಸಿ ಮುಂದಿನ ಮೂರು ವರ್ಷಗಳಲ್ಲಿ ಪಕ್ಷದ, ಕಾರ್ಮಿಕ ಆಂದೋಲನದ ಮತ್ತು ಪ್ರಜಾಪ್ರಭುತ್ವ ಚಳುವಳಿಯ ರೂಪ-ರೇಷೆಗಳನ್ನು, ದಿಕ್ಕನ್ನು ನವೆಂಬರ್ 27 ರಿಂದ 30 ರವರೆಗೆ ಬೆಂಗಳೂರಿನ ಕಾಂ.ಪಿ.ರಾಮಮೂರ್ತಿ ನಗರದಲ್ಲಿ ಕೂಲಂಕಷವಾಗಿ ಚರ್ಚಿಸಿದ ಸಿ.ಪಿ.ಐ.(ಎಂ) ನ 13ನೇ ಕರ್ನಾಟಕ ರಾಜ್ಯ ಸಮ್ಮೇಳನದ ಸಂಕ್ಷಿಪ್ತ ವರದಿ.

ನವೆಂಬರ್ 27ರಂದು ಪುರಭವನದಲ್ಲಿ ಉದ್ಘಾಟನಾ ಕಾರ್ಯಕ್ರಮದ ನಂತರ ಸಂಜೆ 4 ಗಂಟೆಗೆ ಕಾಂ.ಪಿ. ರಾಮಮೂರ್ತಿ ನಗರದಲ್ಲಿ ಪ್ರತಿನಿಧಿಗಳ ಅದಿವೇಶನ ಆರಂಭವಾಯಿತು. ಕಾಂ.ಸಿ. ನಂಜುಂಡಪ್ಪ, ಕಾಂ.ವಿ.ಜೆ.ಕೆ. ನಾಯರ್, ಕಾಂ.ಕೆ. ಮೂಸಬ್ಬ ಹಾಗೂ ಕಾಂ.ಹರಿಣಿ ಕಕ್ಕೇರಿ ಸಮ್ಮೇಳನದ ಅಧ್ಯಕ್ಷಮಂಡಳಿಗೆ ಸರ್ವಾನು ಮತದಿಂದ ಆಯ್ಕೆಯಾದರು. ಸೆಕ್ರೆಟಾರಿಯೆಟ್ ಸದಸ್ಯ ಕಾಂ.ಎನ್.ಕೆ. ಉಪಾಧ್ಯಾಯರು ಕಳೆದ ಮೂರು ವರ್ಷಗಳಲ್ಲಿ ಅಂತರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯದ ಕಾರ್ಮಿಕ ಆಂದೋಲನದಲ್ಲಿ, ದುಡಿಯುವ ಜನಗಳ ಪರವಾದ ಹೋರಾಟಗಳಲ್ಲಿ ದುಡಿದು ಪ್ರಾಣಾರ್ಪಣೆ ನೀಡಿದ, ನಿಧನರಾದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸೂಚಿಸುವ ನಿರ್ಣಯಗಳನ್ನು ಮಂಡಿಸಿದರು. ಶ್ರದ್ಧಾಂಜಲಿ ಅರ್ಪಿಸಿದ ನಂತರ ನಿರ್ಣಯ ಸಮಿತಿ, ಅರ್ಹತಾ ಪರಿಶೀಲನಾ ಸಮಿತಿ ಮತ್ತು ಮಾರ್ಗದರ್ಶಿ ಸಮಿತಿಗಳನ್ನು ಆರಿಸಲಾಯಿತು. ಕಾಂ.ಎನ್.ಕೆ. ಉಪಾಧ್ಯಾಯರ ಸಂಚಾಲಕತ್ವದಲ್ಲಿ ಕಾಂ.ಎಂ.ಎನ್.ಉಗ್ರಪ್ಪ, ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಕಾಂ.ಜಿ.ಎನ್.ನಾಗರಾಜ್ ಮತ್ತು ಕಾಂ.ಎಸ್.ವೈ.ಗುರುಶಾಂತ್‌ರವರಿದ್ದ ನಿರ್ಣಯ ಸಮಿತಿ ಹಾಗೂ ಕಾಂ.ಕೆ.ಆರ್. ಶ್ರೀಯಾನ್ ಸಂಚಾಲಕತ್ವದಲ್ಲಿ ಕಾಂ.ಚಂದ್ರಶೇಖರ್ ಬಾಳೆ ಮತ್ತು ಕಾಂ. ನಿತ್ಯಾನಂದ ಸ್ವಾಮಿಯವರಿದ್ದ ಅರ್ಹತಾ ಪರಿಶೀಲನಾ ಸಮಿತಿ ರಚನೆಗೊಂಡಿತು. ರಾಜ್ಯ ಸೆಕ್ರೆಟಾರಿಯೆಟ್ ಮಾರ್ಗದರ್ಶಿ ಸಮಿತಿಯಾಗಿ ಕಾರ್ಯನಿರ್ವಹಿಸಬೇಕೆಂದು ನಿರ್ಧರಿಸಲಾಯಿತು.

ರಾಜ್ಯ ಸಮಿತಿಯ ವರದಿಯ ಮುದ್ರಿತ ಪ್ರತಿಗಳನ್ನು ಪ್ರತಿನಿಧಿಗಳಿಗೆ ಮತ್ತು ವೀಕ್ಷಕರಿಗೆ ಮೊದಲೆ ಒದಗಿಸಲಾಗಿತ್ತು. ರಾಜ್ಯ ಕಾರ್ಯದರ್ಶಿ ಕಾಂ.ಪಿ. ರಾಮಚಂದ್ರರಾವ್ ವರದಿಯ ಮುಖ್ಯ ಅಂಶಗಳನ್ನು ವಿವರಿಸಿದರು.

ಎರಡನೇ ಮತ್ತು ಮೂರನೇ ದಿನ ವರದಿಯ ಮೇಲೆ ನಡೆದ ಚರ್ಚೆಯಲ್ಲಿ ಎಲ್ಲಾ ಜಿಲ್ಲೆಗಳ ಮತ್ತು ರಂಗಗಳ 66 ಸಂಗಾತಿಗಳು ಭಾಗವಹಿಸಿದರು. ಕಾಂ.ಬಿ.ಟಿ.ಆರ್. ನಂತರ ಗಮನಿಸಿದಂತೆ ಚರ್ಚೆ ವಸ್ತುನಿಷ್ಠವಾಗಿ ನಡೆಯಿತು. ಪ್ರತಿನಿದಿಗಳು ವರದಿಯ ಬಗ್ಗೆ, ರಾಜ್ಯದ ರಾಜಕೀಯ ಬೆಳವಣಿಗೆಗಳ ಬಗ್ಗೆ ತಮ್ಮ ಅನುಭವಗಳನ್ನಾಧರಿಸಿದ ಅಭಿಪ್ರಾಯಗಳನ್ನು ತಾವು ನಡೆಸಿದ ಹೋರಾಟಗಳ (ಇವುಗಳಲ್ಲಿ ಬಹಳಷ್ಟು 'ಐಕ್ಯರಂಗ'ದಲ್ಲಿ ನಾವು ಓದಿರದ ಹೋರಾಟಗಳು!) ಬಗ್ಗೆ, ತಮ್ಮ ಹಾಗೂ ರಾಜ್ಯ ಸಮಿತಿಯ ಕಾರ್ಯನಿರ್ವಹಣೆಯಲ್ಲಿ ತಾವು ಕಂಡ ದೌರ್ಬಲ್ಯಗಳ ಬಗ್ಗೆ ಅವನ್ನು ಪರಿಹರಿಸಿಕೊಳ್ಳುವ ವಿಧಾನಗಳ ಬಗ್ಗೆ ಮಾತನಾಡಿದರು. ಪ್ರಜಾಸತ್ತಾತ್ಮಕ ಕೇಂದ್ರದಡಿಯಲ್ಲಿ ಆಂತರಿಕ ಪ್ರಜಾಸತ್ತೆಯ ಒಂದು ನೋಟ ಇಲ್ಲಿ ಕಂಡು ಬಂತು.

ವರದಿಯ ಮೇಲೆ ಚರ್ಚೆಯ ನಡುವೆಯೇ ರಾಜ್ಯದ, ದೇಶದ ಸಮಸ್ಯೆಗಳನ್ನು ಕುರಿತಂತೆ ವಿವಿಧ ಠರಾವುಗಳ ಮೇಲೂ ಚರ್ಚೆ ನಡೆದು ಅಂಗೀಕರಿಸಲ್ಪಟ್ಟವು.

ಕೊನೆಯ ದಿನದ ಕಲಾಪಗಳ ಆರಂಭದಲ್ಲಿ ಕಾಂ.ಚಂದ್ರಶೇಖರಬಾಳೆಯವರು ಅರ್ಹತಾ ಪರಿಶೀಲನಾ ಸಮಿತಿಯ ವರದಿಯನ್ನು ಮಂಡಿಸಿದರು. ನಂತರ ರಾಜ್ಯ ಕಾರ್ಯದರ್ಶಿಗಳು ಎರಡುದಿನ ನಡೆದ ಚರ್ಚೆಗೆ ರಾಜ್ಯ ಸಮಿತಿಯ ಪರವಾಗಿ ಉತ್ತರ ನೀಡಿದರು. ರಾಜ್ಯ ಸಮಿತಿ ಅಂಗೀಕರಿಸಿದ ಸೂಚನೆಗಳೊಂದಿಗೆ ವರದಿ ಸರ್ವಾನುಮತದಿಂದ ಅಂಗೀಕೃತವಾಯಿತು. ಹೊಸ ರಾಜ್ಯ ಸಮಿತಿ, ಸೆಕ್ರೆಟಾರಿಯೆಟ್ ಮತ್ತು ಕಾರ್ಯದರ್ಶಿಗಳ ಚುನಾವಣೆಗಳ ನಂತರ ಸಮ್ಮೇಳನದಾದ್ಯಂತ ಹಾಜರಿದ್ದು ಚರ್ಚೆಯನ್ನು ಆಲಿಸುತ್ತಿದ್ದ ಕಾಂ.ಬಿ.ಟಿ.ಆರ್. ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು.

ಹೊಸ ರಾಜ್ಯ ಸಮಿತಿ, ಸೆಕ್ರೆಟಾರಿಯೆಟ್ ಹಾಗೂ ಕಾರ್ಯದರ್ಶಿಗಳನ್ನು ಮತ್ತು ಪ್ರತಿನಿಧಿಗಳನ್ನು ಅಭಿನಂದಿಸುತ್ತಾ ಆರಂಭಿಸಿದ ಕಾಂ.ಬಿ.ಟಿ.ಆರ್. ಸಮ್ಮೇಳನದಲ್ಲಿ ಚರ್ಚೆ ಉತ್ತಮ ಮಟ್ಟದಲ್ಲಿ, ವಸ್ತುನಿಷ್ಠವಾಗಿ ನಡೆಯಿತು ಎಂದು ಗಮನಿಸಿದರು. ಅವು ಜನಗಳ ನಡುವೆ ದುಡಿದ ಪ್ರತಿನಿದಿಗಳ ಅನುಭವನಗಳನ್ನು ಆಧರಿಸಿದ್ದುದೇ ಇದಕ್ಕೆ ಕಾರಣ ಎಂದರು. ರಾಜ್ಯ ಸಮಿತಿಯ ಈ ದಸ್ತಾವೇಜು ಕಳೆದ ಮೂರು ವರ್ಷಗಳ ಬೆಳವಣಿಗೆಗಳ ಹೋರಾಟಗಳ ಉತ್ತಮ ವರದಿ ನೀಡಿದ್ದರೂ, ಅದರಲ್ಲಿ ಕೆಲವು ನ್ಯೂನತೆಗಳು, ಉಳಿದುಕೊಂಡಿವೆ ಎಂದು ಅವರು ಗಮನಿಸಿ ಆ ನ್ಯೂನ್ಯತೆಗಳನ್ನು ಪ್ರತಿನಿಧಿಗಳ ಗಮನ ಸೆಳೆದರು. ನಮ್ಮ ಪಾಳೆಯ ಗಾರಿ -ವಿರೋಧಿ, ಸಾಮ್ರಾಜ್ಯಶಾಹಿ-ವಿರೋದಿ ಗುರಿಗಳನ್ನು ವರ್ಗಸಮತೋಲನವನ್ನು ಕಾರ್ಮಿಕ ವರ್ಗದ ಪರವಾಗಿ ಬದಲಿಸುವ ಕರ್ತವ್ಯವನ್ನು ಮರೆಯುವಂತಿಲ್ಲ. ಕಳೆದ ಮೂರು ವರ್ಷಗಳು ಕರ್ನಾಟಕದಲ್ಲೂ ತುಂಬಾ ಚಟುವಟಿಕೆಗಳಿಂದ ಕೂಡಿದ ಕಾಲ. ಕರ್ನಾಟಕದಲ್ಲಿ ನಮ್ಮ ಚಳುವಳಿಯ ವ್ಯಾಪ್ತಿ ಹೆಚ್ಚಿದೆ. ಆದರೆ ಇದು ಕೇವಲ ಇಲ್ಲಿನ ಸಂಗಾತಿಗಳ ಸಂಘಟನಾ ಕುಶಲತೆಯಿಂದ ಮಾತ್ರವೇ ಅಲ್ಲ, ದೇಶಾದ್ಯಂತ ಎದ್ದುಬರುತ್ತಿರುವ ಸಾಮೂಹಿಕ ಉತ್ಕ್ರಾಂತಿಯ ಹಿನ್ನೆಲೆ ಕೂಡಾ ಇದೆ ಎಂದು ಬಿ.ಟಿ.ಆರ್. ನೆನಪಿಸಿದರು. ನಮ್ಮ ರಾಜ್ಯಸಮಿತಿಯ ಸಂಖ್ಯೆ 20 ರಿಂದ 28ಕ್ಕೇರಿದ್ದುದರ, ಇತರ ರಾಜ್ಯಗಳ ಸಮಿತಿಗಳ ಸಂಖ್ಯೆಗಳೂ ಸುಮಾರಾಗಿ ದ್ವಿಗುಣಗೊಂಡಿರುವುದರ ಮಹತ್ವವನ್ನು ವಿವರಿಸುತ್ತಾ ಇದು ರಾಜ್ಯಾದ್ಯಂತ ಸಾಮೂಹಿಕ ಆಂದೋಲನ ವಿಸ್ತಾರಗೊಳ್ಳುತ್ತಿರುವುದರ ಸಂಕೇತ ಎಂದರು. ಬೇರೆ ಬೇರೆ ಹೊಸ-ಹೊಸ ರಂಗಗಳಲ್ಲಿ ದುಡಿದವರ ಅನುಭವಗಳನ್ನು ಪಕ್ಷದಲ್ಲಿ ಕ್ರೋಢೀಕರಿಸಲು ಇದು ಅಗತ್ಯ ಎಂದರು.

ರಾಜ್ಯ ಸಮಿತಿಯ ವರದಿ ಕರ್ನಾಟಕದ ಉತ್ತಮ ರಾಜಕೀಯ ವಿಶ್ಲೇಷಣೆ ನೀಡಿದೆಯೆಂದ ಕಾಂ.ರಣದಿವೆಯವರು ಕರ್ನಾಟಕದಲ್ಲಿ ಒಂದು ದ್ವಿಮುಖ ಪ್ರಕ್ರಿಯ ನಡೆಯುತ್ತಿದೆ ಎಂದರು. ಜನತಾ ಪಕ್ಷ ಈಗಲೂ ಕಾಂಗ್ರೆಸ್ (ಐ) ವಿರೋಧಿ ಅಸಂತೃಪ್ತಿಯನ್ನು ಪ್ರತಿನಿಧಿಸುತ್ತಿದ. ಇನ್ನೊಂದೆಡೆ ಅದು ತನ್ನ ಪ್ರಭಾವವನ್ನೂ ಕಳೆದುಕೊಳ್ಳುತ್ತಿದೆ. ಇಂತಹ ಸನ್ನಿವೇಶದಲ್ಲಿ ಜನತೆಯ ಅಸಂತೃಪ್ತಿಯನ್ನು ಎಡ-ಪ್ರಜಾಪ್ರಭುತ್ವ ಮಾರ್ಗದತ್ತ ಕ್ರೋಢೀಕರಿಸಿ, ಅದು ಮತ್ತೆ ಕಾಂಗ್ರೆಸ್(ಐ)ನತ್ತ ಹರಿಯದಂತೆ ಮಾಡುವುದು ಎಷ್ಟರಮಟ್ಟಿಗೆ ನಮಗೆ ಸಾಧ್ಯ ಎಂಬುದರ ಮೇಲೆ ಯಶಸ್ಸು ನಿಂತಿದೆ ಎಂದುಬಿ.ಟಿ.ಆರ್ ನುಡಿದರು.

ಕಳೆದ 30-40 ವರ್ಷಗಳಲ್ಲಿ ಸಾವಿರಾರು ಮಹಿಳಾ ಕಾರ್ಮಿಕರು ಪಕ್ಷಕ್ಕೆ ವಿಧೇಯರಾಗಿ ಹೋರಾಡಿದ್ದರೂ ಈ ಸಮ್ಮೇಳನದಲ್ಲಿ ಕೇವಲ ಹತ್ತು ಮಹಿಳಾ ಪ್ರತಿನಿಧಿಗಳಿದ್ದ ಸಂಗತಿಯತ್ತ ಪ್ರತಿನಿಧಿಗಳ ರಾಜ್ಯ ಸಮಿತಿಯ ಗಮನ ಸೆಳೆದ ಅವರು ಇದರಲ್ಲಿ ಎಲ್ಲರೂ ತಪ್ಪಿತಸ್ಥರು ಎಂದರು. ಪಾಳೆಯಗಾರೀ ಮೌಲ್ಯಗಳಿಂದ ಹೊರಬರದೆ ಮಾರ್ಕ್ಸ್‌ವಾದಿಗಳಾಗುವುದು ಸಾಧ್ಯವಿಲ್ಲ ಎಂದು ಅವವರು ಹೇಳಿದರು.

ಸೋವಿಯತ್ ಒಕ್ಕೂಟದಲ್ಲಿ ಆಂತರಿಕ ಬೆಳವಣಿಗೆಗಳ ಬಗ್ಗೆ ಕೇಂದ್ರ ಸಮಿತಿಯ ಅತ್ತೀಚಿನ ಎರಡು ನಿರ್ಣಯಗಳ ಬಗ್ಗೆ ಸ್ಥೂಲವಾಗಿ ವಿವರಿಸುತ್ತಾ ಸಿ.ಪಿ.ಐ(ಎಂ) ಹೊಂದಿರುವ ಭಿನ್ನಾಭಿಪ್ರಾಯಗಳ ಸ್ವರೂಪವನ್ನು ಬಿ.ಟಿ.ಆರ್ ತಿಳಿಸಿದರು.

ಒಟ್ಟಾಗಿ ಹೇಳುವುದಾದರೆ ರಾಜ್ಯ ಸಮಿತಿಯ ವರದಿಯನ್ನು ಸಮ್ಮೇಳನದ ಚರ್ಚೆ ಹೋರಾಟಗಳನ್ನು ಮುಂದೊಯ್ಯುವಲ್ಲಿ ಬಹಳ ನೆರವು ನೀಡಬೇಕು. ವಿಶೇಷವಾಗಿ ಪಕ್ಷದೊಳಗೆ ಹಿಂದಿನ ಸಮ್ಮೇಳನದಲ್ಲಿದ್ದುದಕ್ಕಿಂತ ಹೆಚ್ಚಿನ ಐಕ್ಯತೆಯ ಉತ್ತಮ ವಾತಾವರಣವಿರುವಾಗ ಎಂದು ಅಭಿಪ್ರಾಯಪಟ್ಟ ಬಿ.ಟಿ.ಆರ್ ಸಮ್ಮೇಳನದ ಕರೆಗೆ ಒಗೊಟ್ಟು ಎಲ್ಲಾ ಸಿದ್ಧತೆಗಳಲ್ಲಿ ನೆರವಾಗಿ ಸಮ್ಮೇಳನವನ್ನು ಕಾರ್ಮಿಕವರ್ಗದ ಈ ನಗರ ಯಶಸ್ವಿಯಾಗಿ ನಡೆಸಿದ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಈ ಸಮ್ಮೇಳನದ ವರದಿಯ ನೆರವಿನಿಂದ ಹೊಸ ರಾಜ್ಯ ಸಮಿತಿಯ ಮಾರ್ಗದರ್ಶನದಲ್ಲಿ, ತಿರುವನಂತಪುರ ಮಹಾಧಿವೇಶನ ಕೈಗೊಳ್ಳುವ ನಿರ್ಣಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಕರ್ನಾಟಕದಲ್ಲಿ ಅಪಾರ ತ್ಯಾಗದ ಮತ್ತು ಎಲ್ಲಾ ರೀತಿಯ ಸಮಯಸಾದಕತನದ ವಿರುದ್ಧ ಹೋರಾಟದ ಶ್ರೀಮಂತ ಪರಂಪರೆಯುಳ್ಳ ಪಕ್ಷ ಜನತೆಯ ಹೆಚ್ಚುತ್ತಿರುವ ಅಸಂತೃಪ್ತಿಗೆ ದನಿ ನೀಡಿ ಜನಸಮೂಹಗಳ ನಡುವೆ ಇದುವರೆಗಿಂತ ಹೆಚ್ಚು ಉತ್ತಮವಾದ ಸ್ಥಾನ ಪಡೆಯಲು ಸಾಧ್ಯ ಎಂಬ ಬಗ್ಗೆ ತನಗೆ ಪೂರ್ಣ ಭರವಸೆ ಇದೆಯೆಂದ ಬಿ.ಟಿ.ಆರ್. ಈಗ ನಮ್ಮ ರಾಜಕೀಯ ಲೈನು ಜನತೆಯ ಅಸಂತೃಪ್ತಿಯೊಂದಿಗೆ ಮೇಳವಿಸಿರುವಾಗ ನಾವು ಅಗಾಧ ಮುನ್ನಡೆ ಸಾಧಿಸಿ ಒಂದು ದೊಡ್ಡ ಸಾಮೂಹಿಕ ಪಕ್ಷವಾಗುವಲ್ಲಿ ಯಾವ ತೊಂದರೆಯೂ ಇರಲಾರದು ಎಂದು ಹೇಳಿ ಹೆಚ್ಚೆಚ್ಚು ಜನವಿಭಾಗಗಳು ನಮ್ಮ ಪಕ್ಷದ ಮೇಲೆ ಇಡುತ್ತಿರುವ ಅಪಾರ ಭರವಸೆಯನ್ನು ಹುಸಿಗೊಳಿಸದೆ ಮುನ್ನಡೆಯಬೇಕೆಂದು ಸಲಹೆಮಾಡಿದರು.

(ವರದಿ-ಕೆ.ವಿ)

> ರಾಜ್ಯ ಸಮಿತಿ ವರದಿ ಗಮನಿಸಿದಂತೆ ಕರ್ನಾಟಕದಲ್ಲಿ ಒಂದು ದ್ವಿಮುಖ ಪ್ರಕ್ರಿಯೆ ನಡೆಯುತ್ತಿದೆ. ಜನತಾಪಕ್ಷ ಈಗಲೂ ಕಾಂಗ್ರೆಸ್(ಐ)-ವಿರೋಧಿ ಅಸಂತೃಪ್ತಿಯನ್ನು ಪ್ರತಿನಿಧಿಸುತ್ತಿದೆ. ಇನ್ನೊಂದೆಡೆ ಅದು ತನ್ನ ಪ್ರಭಾವವನ್ನು ಕಳಕೊಳ್ಳುತ್ತಿದೆ. ಇಂತಹ ಸನ್ನಿವೇಶದಲ್ಲಿ ಜನತೆಯ ಅಸಂತೃಪ್ತಿಯನ್ನು ಎಡ-ಪ್ರಜಾಪ್ರಭುತ್ವ ಮಾರ್ಗದತ್ತ ಹರಿಸುವುದು, ಕಾಂಗ್ರೆಸ್(ಐ)ನ್ನು ಜನರಿಂದ ಧೂರೀಕರಿಸುವುದು ಎಷ್ಟರ ಮಟ್ಟಿಗೆ ನಮಗೆ ಸಾಧ್ಯ ಎಂಬುದರ ಮೇಲೆ ನಮ್ಮ ಯಶಸ್ಸು ನಿಂತಿದೆ.
>
> —ಬಿ.ಟಿ.ಆರ್

> ಕರ್ನಾಟಕದಿಂದ ಹತ್ತುಸಾವಿರ ಜನ ನಡುಗುವ ಚಳಿಯಲ್ಲಿ ದೆಹಲಿಗೆ ಬಂದದ್ದು ಕೇವಲ ನಮ್ಮ ಮನವಿಯಿಂದಾಗಿ ಅಲ್ಲ; ಜನಸಮೂಹಗಳಲ್ಲಿ ಆಗಲೇ ಚಲನೆ ಆರಂಭವಾಗಿರುವುದರಿಂದ. ಈ ಸಂಗತಿ ಅರಿಯದಿದ್ದರೆ ನಾವು ಇದರಿಂದ ಸರಿಯಾದ ಪಾಠ ಕಲಿಯಲು ಸಾಧ್ಯವಿಲ್ಲ. ನೀವು ಒಳ್ಳೆಯ ಕೆಲಸಮಾಡಿದ್ದೀರಿ. ಆದರೆ ಸಾಮೂಹಿಕ ಅಸಂತೃಪ್ತಿಗೆ ಹೋಲಿಸಿದರೆ ನೀವು ಮಾಡಬೇಕಾದುದು ಇನ್ನು ಬಹಳಷ್ಟಿದೆ. ಜನಸಮೂಹಗಳಲ್ಲಿ ಅಗಾಧ ಅಸಂತೃಪ್ತಿಯಿದೆ.
>
> —ಬಿ.ಟಿ.ಆರ್

13 ನೇ ಸಮ್ಮೇಳನ ಆರಿಸಿದ ಹೊಸ ರಾಜ್ಯ ಸಮಿತಿ

ನವೆಂಬರ್ 27 ರಿಂದ 30 ರವರೆಗೆ ನಡೆದ ಸಿ.ಪಿ.ಐ(ಎಂ) ನ 13 ನೇ ಕರ್ನಾಟಕ ರಾಜ್ಯ ಸಮ್ಮೇಳನ 28 ಸದಸ್ಯರುಳ್ಳ ಹೊಸ ರಾಜ್ಯ ಸಮಿತಿಯನ್ನು ಸರ್ವಾನುಮತದಿಂದ ಆರಿಸಿತು. ನಂತರ ಏಳು ಸದಸ್ಯರುಳ್ಳ ರಾಜ್ಯ ಕಾರ್ಯದರ್ಶಿ ಮಂಡಳವನ್ನು ಆರಿಸಲಾಯಿತು. ಕಾಂ.ಪಿ.ರಾಮಚಂದ್ರರಾವ್ ರಾಜ್ಯ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡಿದ್ದಾರೆ.

ಹೊಸ ರಾಜ್ಯ ಸಮಿತಿಯ ವಿವರ ಹೀಗಿದೆ :

ಕಾರ್ಯದರ್ಶಿ ಮಂಡಳಿ

ಕಾ// ಪಿ.ರಾಮಚಂದ್ರರಾವ್ (ಕಾರ್ಯದರ್ಶಿ).
,, ಎಸ್.ಸೂರ್ಯನಾರಾಯಣರಾವ್
,, ಕೆ.ಆರ್.ಶ್ರೀಯಾನ್
,, ಎನ್.ಕೆ.ಉಪಾಧ್ಯಾಯ
,, ಸಿ.ನಂಜುಂಡಪ್ಪ
,, ವಿ.ಜೆ.ಕೆ.ನಾಯರ್
,, ಜಿ.ವಿ.ಶ್ರೀರಾಮರೆಡ್ಡಿ

ಸದಸ್ಯರು :

ಕಾ// ಎನ್.ಎಲ್.ಉಪಾಧ್ಯಾಯ	,, ನಾಗಮೋಹನ ದಾಸ್
,, ಕೆ.ಮೂಸಬ್ಬ	,, ಎಸ್.ಆರ್.ಆರಾಧ್ಯ
,, ಅಬ್ರಹಾಂ ಕರ್ಕಡ	,, ಎಸ್.ರೇವಣ್ಣ
,, ಮಹಮ್ಮದ್ ದಸ್ತಗೀರ್	,, ಹರಿಣಿ ಕಕ್ಕೇರಿ
,, ಟಿ.ಎಸ್.ಮಣಿ	,, ಬಿ.ಮಾಧವ
,, ಕೆ.ಎಂ.ವೆಂಕಟೇಶ್	,, ಪುರುಷೋತ್ತಮ ಕಲಾಲಬಂಡಿ
,, ವಿ.ಎನ್.ಹಳಕಟ್ಟಿ	,, ವಿ.ಸುಕುಮಾರ್
,, ಕಲ್ಲಪ್ಪ ಕಿರಣಗಿ	,, ನಿತ್ಯಾನಂದ ಸ್ವಾಮಿ
,, ಸಿ.ಚಂದ್ರಶೇಖರ ಬಾಳೆ	,, ಜಿ.ಎನ್.ನಾಗರಾಜ್
,, ಪಿ.ಜಗನ್ನಾಥ್	,, ಮಾರುತಿ ಮಾನ್ಪಡೆ

ಕಾಂ. ಎಂ. [illegible]

13ನೇ ಮಹಾಧಿವೇಶನಕ್ಕೆ ಪ್ರತಿನಿಧಿಗಳು

ತಿರುವನಂತಪುರದಲ್ಲಿ ನಡೆಯುವ 13 ನೇ ಮಹಾಧಿವೇಶನಕ್ಕೆ ರಾಜ್ಯದಿಂದ 7 ಪ್ರತಿನಿಧಿಗಳನ್ನು ಮತ್ತು ಇಬ್ಬರು ವೀಕ್ಷಕರನ್ನು ಆರಿಸಲಾಯಿತು.

ಪ್ರತಿನಿಧಿಗಳು: ಎಸ್.ಸೂರ್ಯನಾರಾಯಣರಾವ್, ಸಿ.ನಂಜುಂಡಪ್ಪ, ವಿ.ಜೆ.ಕೆ.ನಾಯರ್, ಕೆ.ಆರ್.ಶ್ರೀಯಾನ್, ಎನ್.ಕೆ.ಉಪಾಧ್ಯಾಯ, ಟಿ.ಎಸ್.ಮಣಿ ಮತ್ತು ಹರಿಣಿ ಕಕ್ಕೇರಿ.

ವೀಕ್ಷಕರು: ಸಿ.ಚಂದ್ರಶೇಖರಬಾಳೆ ಮತ್ತು ಜಿ.ವಿ.ಶ್ರೀರಾಮರೆಡ್ಡಿ

ರಾಜ್ಯದ ಆರ್ಥಿಕ ಬಿಕ್ಕಟ್ಟು ಕೇಂದ್ರದ ನೀತಿಯ ವಿರುದ್ಧ ಹೋರಾಟಕ್ಕಿಳಿಯಬೇಕು

ಕರ್ನಾಟಕ ಆರ್ಥಿಕ ಬಿಕ್ಕಟ್ಟು ಕುರಿತಂತೆ 13ನೇ ಸಮ್ಮೇಳನ ಒಂದು ನಿರ್ಣಯವನ್ನು ಅಂಗೀಕರಿಸಿತು ಅದು ಹೀಗಿದೆ.

ಕರ್ನಾಟಕ ರಾಜ್ಯ ಸರ್ಕಾರ ಈಗ 3-4 ವರ್ಷಗಳಿಂದ ಆರ್ಥಿಕ ಬಿಕ್ಕಟ್ಟಿನಿಂದ ತೀವ್ರವಾಗಿ ಬಳಲುತ್ತಿರುವುದನ್ನು ಹಾಗೂ ಈ ಬಿಕ್ಕಟ್ಟು ದಿನದಿಂದ ದಿನಕ್ಕೆ ತೀವ್ರವಾಗುತ್ತಿರುವ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 13ನೇ ರಾಜ್ಯ ಸಮ್ಮೇಳನ ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ.

ತೀವ್ರ ಆರ್ಥಿಕ ಬಿಕ್ಕಟ್ಟಿನಿಂದಾಗಿ ಒಂದೆಡೆ ರಾಜ್ಯದ ಅನೇಕ ಅಭಿವೃದ್ಧಿ ಯೋಜನೆಗಳು ಸ್ಥಗಿತಗೊಳ್ಳುತ್ತಿವೆ. ದೈನಂದಿನ ಕೆಲಸಗಳಿಗೂ ತೊಂದರೆಯಾಗಿದೆ. ಜಿಲ್ಲಾ ಪರಿಷತ್ ಮಂಡಲ ಪಂಚಾಯತಿಗಳಿಗೆ ಸಂಪನ್ಮೂಲ ಹಂಚಿಕೆ ಸರಿಯಾಗಿ ಆಗಲು ಸಾಧ್ಯವಾಗಿಲ್ಲ. ಖಾಲಿಯಾದ ಸರ್ಕಾರಿ ಹುದ್ದೆಗಳನ್ನು ತುಂಬದೆ ಆಸ್ಪತ್ರೆಗಳು, ಶಾಲೆ-ಕಾಲೇಜುಗಳು ಹಾಗೂ ಸರ್ಕಾರಿ ಕಛೇರಿಗಳಲ್ಲಿನ ಕೆಲಸಕ್ಕೆ ಹಾಗೂ ಜನಸಾಮಾನ್ಯರಿಗೆ ತೊಂದರೆಯಾಗಿದೆ. ಸರ್ಕಾರ ತನ್ನ ಶಿಕ್ಷಣ ಸೇವೆಯನ್ನು ಆರೋಗ್ಯ ಸೇವೆಯನ್ನು ವಿಸ್ತರಿಸದೆ ಶಿಕ್ಷಣರಂಗದ, ಆರೋಗ್ಯ ರಂಗದ ವ್ಯಾಪಾರಿಕರಣಕ್ಕೆ ಕಾರಣವಾಗಿದೆ ಎಂದು ಸಮ್ಮೇಳನ ಅಭಿಪ್ರಾಯ ಪಡುತ್ತದೆ.

ರಾಜ್ಯ ಸರ್ಕಾರದ ಈ ಆರ್ಥಿಕ ಬಿಕ್ಕಟ್ಟು ಭಾರತದ ಇತರ ರಾಜ್ಯ ಸರ್ಕಾರಗಳು ಅದರಲ್ಲಿಯೂ ವಿರೋಧ ಪಕ್ಷದ ಸರ್ಕಾರಗಳು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟಿನ ಭಾಗವಾಗಿದೆಯೆಂಬುದನ್ನೂ ಸಮ್ಮೇಳನ ಗುರುತಿಸುತ್ತದೆ.

ಕೇಂದ್ರ ಸರ್ಕಾರ ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಿರುವ , ಈಗ 6-8 ಸಾವಿರ ಕೋಟಿ ರೂ.ಗಳಿಗೆ ಮುಟ್ಟಿರುವ ಖೋಟಾ ಬಜೆಟ್ ಪ್ರವೃತ್ತಿ ಹಾಗೂ ಸರ್ಕಾರ ನಿಯಂತ್ರಣದ ವಸ್ತುಗಳ ಬೆಲೆಯನ್ನು ಏಕಾಏಕಿಯಾಗಿ ಏರಿಸುವ ನೀತಿ ಹಾಗೂ ವಿರೋಧ ಪಕ್ಷಗಳ ಸರ್ಕಾರದ ಬಗ್ಗೆ ಕೇಂದ್ರ ಅನುಸರಿಸುವ ನೀತಿ ಹಾಗೂ ವಿರೋಧ ಪಕ್ಷಗಳ ಸರ್ಕಾರದ ಬಗ್ಗೆ ಕೇಂದ್ರ ಅನುಸರಿಸುವ ಮಲತಾಯಿ ಧೋರಣೆಯೇ ಈ ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಮೂಲ ಕಾರಣವೆಂದು ರಾಜ್ಯ ಸಮ್ಮೇಳನ ಬೊಟ್ಟು ಮಾಡಿ ತೋರಿಸುತ್ತದೆ.

ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಅಸಮತೋಲ ಹಾಗೂ ದಿನೇ ದಿನೇ ಹೆಚ್ಚುತ್ತಿರುವ ಆರ್ಥಿಕ ರಾಜಕೀಯ ಅಧಿಕಾರದ ಕೇಂದ್ರೀಕರಣ, ರಾಜ್ಯಗಳಿಗೆ ಒಂದು ವಾರ ಸಮಯಕ್ಕೆ ಮಾತ್ರ ಓವರ್ ಡ್ರಾಫ್ಟ್ ಸೀಮಿತ ಗೊಳಿಸುವ ಪ್ರವೃತ್ತಿ, ರಿಸರ್ವ್‌ಬ್ಯಾಂಕ್ ನಿರ್ದೇಶಗಳು, ಕೇಂದ್ರದ ಆರ್ಥಿಕ ಸಂಪನ್ಮೂಲವನ್ನು ರಾಜ್ಯಗಳಿಗೆ ಹಂಚಿಕೊಡುವ ಪ್ರವೃತ್ತಿಗೆ ಬದಲಾಗಿ 9ನೆಯ ಆರ್ಥಿಕ ಆಯೋಗ ರಾಜ್ಯದ ಆರ್ಥಿಕ ಅಧಿಕಾರಿಗಳ ಮೇಲೆ ಧಾಳಿಯನ್ನೇ ಆರಂಭಿಸುವ ರೀತಿಯಲ್ಲಿದೆ.

ಕೇಂದ್ರ ಸರ್ಕಾರದ ಅಧಿಕಾರ ಕೇಂದ್ರೀಕರಣದ ನೀತಿ, ರಾಜ್ಯದ ಜನತೆಯ ಹಕ್ಕುಗಳನ್ನು ತುಳಿಯುವ ಸ್ವಾರ್ಥಿ ಪ್ರವೃತ್ತಿಯನ್ನು ವಿರೋಧಿಸಬೇಕೆಂದು ಮುಂದಾಗಬೇಕೆಂದು ಸಿ.ಪಿ.ಐ(ಎಂ)ನ 13ನೇ ಸಮ್ಮೇಳನ ಕರೆ ನೀಡುತ್ತದೆ.

ರಾಜ್ಯದ ಜನತಾ ಸರ್ಕಾರ ಈ ಆರ್ಥಿಕ ಬಿಕ್ಕಟ್ಟನ್ನು ಎದುರಿಸಿದ ರೀತಿ, ಆರ್ಥಿಕ ಬಿಕ್ಕಟ್ಟಿನ ಮೂಲ [illegible] ಜನತೆಯ ಮುಂದೆ [illegible] ತಮ್ಮಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾದ ರೀತಿ ಹಾಗೂ ಈ ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಿಕೊಳ್ಳಲು ತೆರಿಗೆ ವಸೂಲಾತಿಯನ್ನು ಅಬಕಾರಿ ಮತ್ತಿತರ ಮೂಲಗಳಿಂದ ಸಂಪನ್ಮೂಲ ಸಂಗ್ರಹದ ಬಗ್ಗೆ ಉದಾರ ನೀತಿ ಅನುಸರಿಸಿದ ರೀತಿ ಜನತೆಗೆ ಅಸಮಧಾನವನ್ನುಂಟು ಮಾಡಿದೆ.

ಕೊನೆಗೆ ಆ ಆರ್ಥಿಕ ಬಿಕ್ಕಟ್ಟನ್ನು ಜನರ ಮೇಲೆ ಹೇರಲು ತೆರಿಗೆ ಹೇರಿಕೆ, ಸರ್ಕಾರಿ ಸೇವೆಗಳ ಬಸ್, ವಿದ್ಯುತ್, ಹಾಲು ಮುಂತಾದವುಗಳ ದರ ಏರಿಕೆಗಳನ್ನು ರೈತರ ಮೇಲೆ ನೀರು ತೆರಿಗೆ, ಬೆಟರ್‌ಮೆಂಟ್ ಲೆವಿ ಹೇರಿಕೆ ಮಾಡಿರುವುದು ರಾಜ್ಯದ ಜನತೆಯನ್ನು ಸಂಕಷ್ಟಕ್ಕೆ ಸಿಕ್ಕಿಸುತ್ತದೆ.

ಆದುದರಿಂದ 13ನೇ ರಾಜ್ಯ ಸಮ್ಮೇಳನ ಜನತಾ ಸರ್ಕಾರವನ್ನು ಒತ್ತಾಯಿಸುವುದೆಂದರೆ

1) ಕೇಂದ್ರ ಸರ್ಕಾರದ ಕುಟಿಲ ನೀತಿಗಳ ಬಗ್ಗೆ ಜನರನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳಬೇಕು ಹಾಗೂ ಹೋರಾಟಕ್ಕಿಳಿಸ ಬೇಕು.

2) ಬಿಕ್ಕಟ್ಟನ್ನು ಸಾಮಾನ್ಯ ಜನರ ಮೇಲೆ ಹೇರುವುದನ್ನು ಕೈಬಿಡಬೇಕು.

3) ರಾಜ್ಯದಲ್ಲಿ ತೆರಿಗೆ, ಅಬಕಾರಿ ಇತ್ಯಾದಿ ಸಂಪನ್ಮೂಲಗಳ ಸಂಗ್ರಹದ ಸಮಯದಲ್ಲಿ ಬಿಗಿಯಾಗಿ ವರ್ತಿಸಿ ಸಂಪನ್ಮೂಲಗಳನ್ನು ಸಂಗ್ರಹಿಸಬೇಕು

ಎಂದು ಒತ್ತಾಯಿಸುತ್ತದೆ.

ಕಾರ್ಮಿಕರ ಹಿತರಕ್ಷಣೆಯ ನೀತಿ ಅನುಸರಿಸಿ ಜನತಾ ಪಕ್ಷಕ್ಕೆ ಆಗ್ರಹ

ಐದು ವರ್ಷಗಳಲ್ಲಿ ಆರು ಕಾರ್ಮಿಕರನ್ನು ಬದಲಿಸಿದ ಜನತಾ ಸರ್ಕಾರಕ್ಕೆ ಕಾರ್ಮಿಕರ ಏಳಿಗೆಯ ಗುರಿಯಿರುವ ನಿರ್ದಿಷ್ಟ ಕಾರ್ಮಿಕ ನೀತಿ ಇಲ್ಲವೆಂಬುದನ್ನು ತೋರಿಸುತ್ತದೆ ಎಂದು 13ನೇ ಸಮ್ಮೇಳನ ಹೇಳಿದೆ.

ಕರ್ನಾಟಕ ಸರ್ಕಾರದ ಕಾರ್ಮಿಕ ನೀತಿಯ ಬಗ್ಗೆ ಸಮ್ಮೇಳನ ಅಂಗೀಕರಿಸಿದ ಒಂದು ಠರಾವಿನಲ್ಲಿ ಕೆಲವು ಕೈಗಾರಿಕೆಗಳ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿ ಮಾಡುವಲ್ಲಿ, ನಿಗದಿ ಮಾಡಿದ ಕೈಗಾರಿಕೆಗಳಲ್ಲಿ, ಮುಖ್ಯತ ಕೃಷಿ ಕೂಲಿಗಾರರಿಗೆ ಅನ್ಯಾಯವಾಗಿದೆ ಎಂದು ಖಂಡಿಸಲಾಗಿದೆ. ಬೇರೆ ಕೈಗಾರಿಕೆಗಳ ವಿವಾದಗಳಲ್ಲೂ ಪೋಲೀಸರು ಕಾರ್ಮಿಕರ ವಿರುದ್ಧವಾಗಿ ಮಧ್ಯ ಪ್ರವೇಶಿಸುತ್ತಾರೆ; ಮುಚ್ಚಿದ ಕಾರ್ಖಾನೆಗಳನ್ನು ತೆರೆಸಲು ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತಿಲ್ಲ; ಕಾರ್ಖಾನೆ ರೋಗಗ್ರಸ್ತವಾದರೆ ಅದನ್ನು ಖಾಸಗೀಯವರಿಗೆ ವಹಿಸಬೇಕು ಅಥವಾ ಮಾರ ಬೇಕೆಂದು ಸರಕಾರ ಯೋಚಿಸುತ್ತದೆ: ಕಾರ್ಮಿಕ ಇಲಾಖೆಯಲ್ಲಿ, ಕಾರ್ಮಿಕ ನ್ಯಾಯಾಲಯಗಳಲ್ಲಿ ಹುದ್ದೆಗಳನ್ನು ಖಾಲಿ ಬಿಟ್ಟಿರುವುದರಿಂದ ವಿವಾದಗಳ ಇತ್ಯರ್ಥ ವಿಳಂಬಗೊಂಡು ಕಾರ್ಮಿಕರಿಗೆ ನ್ಯಾಯ ದೊರಕುವುದು ತಡವಾಗುತ್ತದೆ ಎಂ… ಹೇಳಿರುವ ನಿರ್ಣಯ ಸರ್ಕಾ… ಅಸಡ್ಡೆಯನ್ನು ಟೀಕಿಸಿದೆ.

ಹಿಂದೆ ಎಸ್.ಆರ್.ಬೊಮ್ಮಾ… ಕಾರ್ಮಿಕ ಸಚಿವರಾಗಿದ್ದಾಗ ಕಾರ್ಮಿ… ಪ್ರತಿನಿಧಿಗಳನ್ನು ಭೇಟಿಯಾಗಲು ಅವ… ಸಮಯವೇ ಸಿಗುತ್ತಿರಲಿಲ್ಲ. ಈ ಅಸ… ಯನ್ನು ಪ್ರತಿಭಟಿಸಿ ಚಳು… ಮಾಡಬೇಕಾಗಿ ಬಂತು. ಮೇ 1987ರ… ಸಚಿವ ಸಂಪುಟ ವಿಸ್ತರಣೆಯಾದ… ಎಸ್.ಕೆ.ಕಾಂತಾ ಕಾರ್ಮಿಕ ಇಲಾ… ವಹಿಸಿಕೊಂಡು ಕಾರ್ಮಿಕರ ಹಿತದ… ಯ ಕೆಲವು ಕ್ರಮ ಕೈಗೊಂಡರು ಎಂ… ನೆನಪಿಸಿ ಕೊಂಡಿರುವ ನಿರ್ಣಯ ಹಿಂ… ಕಾರ್ಮಿಕ ಮಂತ್ರಿಯಾಗಿದ್ದಾಗ ಕನ… ಕೂಲಿ ನಿಗದಿಯಲ್ಲಿ ಅನ್ಯಾಯ ಮಾಡಿ… ಮುಖ್ಯಮಂತ್ರಿಗಳೇ ಕಾರ್ಮಿಕ ಇಲಾ… ವಹಿಸಿಕೊಂಡಿರುವುದು ವಿಶೇಷ ಎಂ… ಭಾವಿಸಿರುವ ನಿರ್ಣಯ ಕಾಮಿ… ಇಲಾಖೆಗೆ ಒಬ್ಬ ಪೂ… ಸಚಿವರ ಅಗತ್ಯವಿದ್ದು ತ… ಅವರನ್ನು ನೇಮಿಸಿ ಕಾರ್ಮಿ… ಹಿತರಕ್ಷಣೆ ಮಾಡುವ ನಿ… ಅನುಸರಿಸ ಬೇಕೆಂದು ರಾ… ಸರ್ಕಾರವನ್ನು ಆಗ್ರಹಪಡಿಸಿದೆ.

ಕರ್ನಾಟಕದಲ್ಲಿ ರೈಲ್ವೆ ಅಭಿವೃದ್ಧಿಗಾಗಿ ವಿಶಾಲ ತಳಹದಿಯ ಹೋರಾಟಕ್ಕೆ ಕರೆ

ಕರ್ನಾಟಕದಲ್ಲಿ ರೈಲ್ವೆ ಅಭಿವೃದ್ಧಿ ಕುರಿತಂತೆ 13ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ನಿರ್ಣಯವನ್ನು ಮುಂದೆ ಕೊಡಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಸಾಕಷ್ಟು ಸಂಪನ್ಮೂಲಗಳಿದ್ದರೂ ಕೈಗಾರಿಕೆಗಳು ಬೆಳೆಯಬೇಕಾದರೆ, ವ್ಯಾಪಾರ ಅಭಿವೃದ್ಧಿಗೊಳ್ಳಬೇಕಾದರೆ, ಬೇರೆ ರಾಜ್ಯಗಳ ಜೊತೆ ಸಂಪರ್ಕ ಬೆಳೆಸಲು ಸುಲಭದ ಸಾಗಾಣಿಕೆಗೆ ಒಂದೇ ಗೇಜಿನ ರೈಲ್ವೆ ಮಾರ್ಗ ಅಗತ್ಯ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿಯೇ, ಬ್ರಿಟಿಷರು ಕಚ್ಚಾವಸ್ತುಗಳ ಮತ್ತು ಜನರ ಚಳುವಳಿಯನ್ನು ಹತ್ತಿಕ್ಕಲು ಸೈನಿಕರ ಸಾಗಾಣಿಕೆಗಾಗಿ ಮಾತ್ರ ಬ್ರಾಡ್ ಗೇಜ್ ರೈಲ್ವೆ ನಿರ್ಮಿಸಿದರು. ಸಂಸ್ಥಾನಗಳು ತಮಗೆ ಬೇಕಾದಷ್ಟೇ ಮೀಟರ್‌ಗೇಜ್, ನ್ಯಾರೋಗೇಜ್ ರೈಲ್ವೆ ಮಾರ್ಗ ಹಾಕಿ ಕೊಂಡಿದ್ದರು.

ಕರ್ನಾಟಕ ರಾಜ್ಯ ರಚನೆಯಾಗಿ ಮೂವತ್ತೆರಡು ವರ್ಷಗಳಾದರೂ ರಾಜ್ಯದ ರೈಲ್ವೆಯಲ್ಲಿ ಗೇಜ್ ಬದಲಾವಣೆಯಾಗಲಿಲ್ಲ. ಹೊಸ ರೈಲ್ವೆ ಮಾರ್ಗ ಕೂಡ ನಿರ್ಮಿತವಾಗಿಲ್ಲ. ಹಾಸನ-ಮಂಗಳೂರು, ಹೊಸ ರೈಲ್ವೆ ಕೂಡ ಮೀಟರ್ ಗೇಜಿನದ್ದಾಗಿದೆ. ಮೀಟರ್ ಗೇಜ್ ಮಾರ್ಗದಿಂದ ಪ್ರಯಾಣಕ್ಕೆ ಹೆಚ್ಚು ಕಾಲಾವಕಾಶ ತಗಲುತ್ತದೆ. ಸರಕುಗಳು ಅವಧಿಗೆ ರಫ್ತಿಗೆ ಅಡಿಯಾಗುತ್ತದೆ. ಆದರಿಂದಾಗಿ ಹಲವಾರು ಜಿಲ್ಲೆಗಳಲ್ಲಿ ಕೈಗಾರಿಕಾಭಿವೃದ್ಧಿ ಕುಂಠಿತಗೊಂಡಿರುವುದನ್ನು ಕಾಣಬಹುದಾಗಿದೆ.

ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದಲೂ ಜನರ, ಮತ್ತು ಸರಕುಗಳ ಸಾಗಾಣಿಕೆಗೂ ಮೀರಜ್-ಬೆಂಗಳೂರು-ಸೋಲಾಪುರ, ಹುಬ್ಬಳ್ಳಿ-ಹೊಸಪೇಟೆ-ಗದಗ-ಲೊಂಡಾ-ವಾಸ್ಕೊ-ಅರಸೀಕೆರೆ- ಮೈಸೂರು-ಹಾಸನ, ಮಂಗಳೂರು-ಬೆಂಗಳೂರು-ಮೈಸೂರು ಬೆಂಗಳೂರು-ಬಂಗಾರುಪೇಟೆ ಮಾರ್ಗಗಳನ್ನು ಬ್ರಾಡ್ ಗೇಜ್ ಆಗುವ ತನಕ ಬೆಂಗಳೂರು ಮಂಗಳೂರು, ಬೆಂಗಳೂರು-ಸೋಲಾಪುರ ಮಾರ್ಗಗಳಲ್ಲಿ ಅತಿ ವೇಗದ ರೈಲ್ವೆಗಳನ್ನು ಓಡಿಸಲೇಬೇಕು.

ಇದರ ಜೊತೆಯಲ್ಲಿಯೇ ಕರ್ನಾಟಕದ ಜನತೆಯ ಬಹುದಿವಸಗಳ ಬೇಡಿಕೆಯಾದ ಹುಬ್ಬಳ್ಳಿ-ಕಾರವಾರ ರೈಲ್ವೆ, ಮುಂಬಯಿ-ಮಂಗಳೂರು ಕೊಂಕಣ ರೈಲ್ವೆ, ಚಾಮರಾಜನಗರ-ಸತ್ಯಮಂಗಲ, ಸೇಲಂ-ಬೆಂಗಳೂರು-ತುಮಕೂರು-ಹೊಸಪೇಟೆ, ಹೊಸ ಬ್ರಾಡ್‌ಗೇಜ್ ಮಾರ್ಗಗಳನ್ನು ಬೆಂಗಳೂರು-ಜೋಲಾರ್‌ಪೇಟೆ, ಬೆಂಗಳೂರು-ಮೈಸೂರು ಮಾರ್ಗಗ… ವಿದ್ಯುದ್ದೀಕರಣಗೊಳಿಸಲು ಕೇಂದ್ರ ಸ… ಹೆಚ್ಚಿನ ಗಮನ ಹರಿಸದೆ, … ಒತ್ತಡಬಂದಾಗ ಮಾತ್ರ ಇಡೀ ರಾ… ಒಂದೆರಡು ಕೋಟಿ ರೂಪಾಯಿ … ಬಜೆಟ್‌ನಲ್ಲಿ ಮಿಸಲಾಗಿಟ್ಟು ರಾ… ಜನತೆಗೆ ಅನ್ಯಾಯವೆಸಗುತ್ತಿದೆ.

ಸಿ.ಪಿ.ಐ(ಎಂ) ಮತ್ತು ಅದರ ನೇತೃ… ಸಾಮೂಹಿಕ ಸಂಘಟನೆಗಳು ದ.ಕ … ಬಿಜಾಪುರ, ಗುಲ್ಬರ್ಗಾ, ಹಾಗೆ… ರಾಜ್ಯದ ಹಲವಾರು ಕಡೆಗಳಲ್ಲಿ … ಮಾರ್ಗಗಳ ಗೇಜ್ ಬದಲಾವಣೆ… ಹೊಸ ಮಾರ್ಗಗಳ ರಚನೆಗಾಗಿ, ವೇ… ರೈಲ್ವೆಗಳ ಜಾರಿಗಾಗಿ ಹೋರಾಡು… ಬಂದಿವೆ. ಕೇಂದ್ರ ರಾಜ್ಯ ಸರಕಾ… ಮೇಲೆ ಒತ್ತಾಯ ತರುತ್ತಲೇ ಬಂದಿವೆ.

ಹಿಂದಿನ ಕಾಂಗ್ರೆಸ್ ಸರ್ಕಾರ ಹಾಗೆ… ಇಂದಿನ ಜನತಾ ಸರ್ಕಾರ ಕೂಡ … ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ … ಒತ್ತಡ ತರುವುದರಲ್ಲಿ ವಿಫಲಗೊಂಡಿವೆ… ರಾಜ್ಯದಿಂದ ಆರಿಸಿ ಹೋಗುವ ಲೋಕ… ಸದಸ್ಯರ ಪಾತ್ರ ಕೂಡ ಈ ವಿಷಯ… ನಿರಾಶಾದಾಯಕವಾಗಿದೆ.

ಆದ್ದರಿಂದ ರಾಜ್ಯದ ರೈಲ್ವೆ ಮಾ… ಗೇಜ್ ಪರಿವರ್ತನೆಗಾಗಿ ಬೆಂಗ… ಜೋಲಾರ್ ಪೇಟೆ, ಬೆಂಗಳೂರು-ಮೈ… ಮಾರ್ಗಗಳನ್ನು ವಿದ್ಯುದ್ದೀ… ಗೊಳಿಸಬೇಕೆಂದೂ ಮಂಗ… ಮುಂಬಯಿ, ಹುಬ್ಬಳ್ಳಿ-ಕಾರವಾರ, … ರಾಜನಗರ-ಸತ್ಯಮಂಗಲ, ತುಮಕ… ಹೊಸಪೇಟೆ ಸೇಲಂ-ಬೆಂಗಳೂರು, … ಬ್ರಾಡ್‌ಗೇಜ್ ರೈಲ್ವೆಗಳನ್ನು … ಪ್ರಾರಂಭಿಸಬೇಕೆಂದೂ ಹಾ… ಬೆಂಗಳೂರು-ಮೀರಜ್, ಬೆಂಗ… ಸೋಲಾಪುರ, ಬೆಂಗಳೂರು-ಮಂಗ… ಮಾರ್ಗದಲ್ಲಿ ಅತಿವೇಗದ … ಓಡಿಸಬೇಕೆಂದು ಅದನ್ನು ಸಾ… ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿ… ಜನತಾ ಪಕ್ಷ ಇತರ ಸಂಘ ಸಂಸ್ಥೆ… ಸೇರಿಸಿ ವಿಶಾಲ ತಳ … ಹೋರಾಟವನ್ನು ರೂಪಿಸ ಬೇಕೆಂದೂ … ಜೊತೆಯಲ್ಲಿಯೇ ಸಿ.ಪಿ.ಐ(ಎಂ) … ಅದರ ನೇತೃತ್ವದ ಸಾ… ಸಂಘಟನೆಗಳು ಸ್ವತಂತ್ರವಾಗಿಯೂ … ಬೇಡಿಕೆಗಳಿಗಾಗಿ ಹೋರಾಟ … ಬೇಕೆಂದೂ ಸಿ.ಪಿ.ಐ(ಎಂ) ಪಕ್ಷದ … ರಾಜ್ಯ ಸಮ್ಮೇಳನ ಕರೆ ಕೊಡುತ್ತದೆ.

ಹರಿಜನ -ಗಿರಿಜನರ ಮೇಲೆ ಪಾಳೆಗಾರೀ ದಬ್ಬಾಳಿಕೆ ರಾಜ್ಯ ಸರ್ಕಾರದ ವಿಫಲತೆಯಖಂಡನೆ

ಇತ್ತೀಚಿನ ದಿನಗಳಲ್ಲಿ ಹರಿಜನ-ಗಿರಿಜನರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು, ಮಲ ತಿನ್ನಿಸುವ, ಉಚ್ಚೆ ಕುಡಿಸುವ, ಚಹದಂಗಡಿಯಲ್ಲಿ ಚಹ ನಿರಾಕರಿಸುವ ಮುಂತಾದ ಅವಹೇಳನಕಾರಕ ಕೃತ್ಯಗಳನ್ನು ಸಿ.ಪಿ.ಐ (ಎಂ) ಬಲವಾಗಿ ಖಂಡಿಸಿದೆ. ಈ ರೀತಿ ದೌರ್ಜನ್ಯ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ರಾಜ್ಯ ಸರ್ಕಾರದ ವಿಫಲತೆಯನ್ನು ಸಮ್ಮೇಳನ ಒಂದು ನಿರ್ಣಯ ಖಂಡಿಸಿದೆ. ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾಪರಿಷತ್, ಮಂಡಲ ಪಂಚಾಯತುಗಳ ಚುನಾವಣೆಗಳ ನಂತರ ಗ್ರಾಮೀಣ ಪ್ರದೇಶಗಳಲ್ಲಿ ಭೂಮಾಲಿಕ ವರ್ಗದ ದೌರ್ಜನ್ಯಗಳು ಹೆಚ್ಚೆಚ್ಚು ಬೆಳಕಿಗೆ ಬರುತ್ತಿವೆ.

ರೈತ ಸಂಘದ ಕೃಷಿ ಕಾರ್ಮಿಕರ ಚಳುವಳಿ ತೀವ್ರಗೊಳ್ಳುತ್ತಿರುವಂತೆಯೇ ಈ ದೌರ್ಜನ್ಯಗಳು ಇನ್ನಷ್ಟು ಹೆಚ್ಚಲಿವೆ. ಪ್ರತಿಗಾಮಿ ಸಂಘಟನೆಗಳು ಈ ಸಂದರ್ಭದ ದುರುಪಯೋಗ ಮಾಡಲಾಗದಂತೆ ನೋಡಿಕೊಳ್ಳಲು ಈ ಜನವಿಭಾಗವನ್ನು ಎಡ ಮತ್ತು ಪ್ರಜಾಪ್ರಭುತ್ವ ಸಂಘಟನೆಯಡಿಯಲ್ಲಿ ತರುವುದು ಅಗತ್ಯ ಎಂದಿರುವ ಈ ನಿರ್ಣಯ ಪಾಳೆಯಗಾರೀ ದೌರ್ಜನ್ಯಕ್ಕೊಳಗಾಗುತ್ತಿರುವ ಹರಿಜನ-ಗಿರಿಜನರ ಸಮಸ್ಯೆ [illegible] ಅವರ ಸಂಘಟನೆಗೆ ಅವರ ಸಮಸ್ಯೆಗಳ ಪರಿಹಾರಕ್ಕೆ ತೀವ್ರ ಗಮನ ಹರಿಸಿ ಅವರಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಪ್ರವಾಹದಲ್ಲಿ [illegible] ಮಾಡಲು ಅವರ ಮಧ್ಯೆ ಹೋಗಿ ಅವರ ಸಂಘಟನೆ ಮಾಡಲು ಪಕ್ಷದ ಘಟಕಗಳಿಗೆ ಕರೆ ನೀಡಿದೆ.

ಜನ ವಿರೋಧಿ ಹೊಸ ಶಿಕ್ಷಣ ನೀತಿ

ನೂತನ ಆರ್ಥಿಕ ನೀತಿ, ನೂತನ ಶಿಕ್ಷಣ ಜವಳಿ ನೀತಿಗಳಿಗೆ ಹೊಂದಿಕೊಂಡೇ ಬಂದಿರುವ ನೂತನ ಶಿಕ್ಷಣ ನೀತಿ ಶಿಕ್ಷಣರಂಗದಲ್ಲಿ ಎರಡು ವರ್ಗ ಪ್ರವಾಹಗಳನ್ನು ಸೃಷ್ಟಿ ಭೇದ ಭಾವಗಳನ್ನು ಸೃಷ್ಟಿಸುತ್ತಿದೆ.

ಇಂತಹ ಕ್ರೂರ ನಯವಂಚಕ ನೀತಿಯ . ವಿರುದ್ಧ . ಪಶ್ಚಿಮಬಂಗಾಳದ ಎಡರಂಗ ಸರಕಾರವೂ ಒಳಗೊಡಂತೆ ದೇಶದ ಎಡ, ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳು ತೀವ್ರವಾಗಿ ಪ್ರತಿಭಟಿಸಿವೆ. ಆದರೂ ಇದನ್ನು ಜಾರಿಗೊಳಿಸಲಾರಂಭಿಸಿರುವ ರಾಜೀವ್ ಸರ್ಕಾರದ ನಿಲುಮೆಯನ್ನು 13ನೇ ಸಮ್ಮೇಳನ ಉಗ್ರವಾಗಿ ಖಂಡಿಸಿದೆ.

ಕಾಂಗ್ರೆಸೇತರ ರಾಜ್ಯ ಸರ್ಕಾರಗಳಲ್ಲಿ ಒಂದಾದ ಕರ್ನಾಟಕದ ಜನತಾ ಸರ್ಕಾರವೂ ಕೇಂದ್ರದ ಶಿಕ್ಷಣ ನೀತಿಯನ್ನು ಒಪ್ಪಿಜಾರಿಗೊಳಿಸಲು ಮುಂದಾಗಿರುವುದು ಆತಂಕಕಾರಿ ಎಂದಿರುವ ಸಮ್ಮೇಳನದ ಠರಾವು ಇದು ರಾಜ್ಯದ ಶಿಕ್ಷಣ ರಂಗದಲ್ಲಿಯೂ ಹಲವಾರು ಅಪಾಯಕಾರಿ ಅಂಶಗಳ ಬೆಳವಣಿಗೆಗೆ ಅನುಕೂಲ ಒದಗಿಸಿದೆ ಎಂದು ಹೇಳಿದೆ.

ಹಿಂದೆ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸ್ವಾಯತ್ತತೆ ನೀಡಿಕೆಯ ವಿರುದ್ಧ ಹೋರಾಟ ನಡೆದು ಅದನ್ನು ತಡೆಯುವಲ್ಲಿ ಯಶಸ್ವಿಯಾಗಿದೆ. ಆದರೆ ರಾಜ್ಯಸರ್ಕಾರ ಈ ಬಗ್ಗೆ ತನ್ನ ನೀತಿ ಬದಲಿಸಲಿಲ್ಲ.

ಈ ಹಿನ್ನೆಲೆಯಲ್ಲಿ ಈ ನೀತಿಯ ಜಾರಿಯನ್ನು ತಕ್ಷಣ ರದ್ದುಪಡಿಸಿ ಪ್ರಗತಿಪರ, ವೈಜ್ಞಾನಿಕ . ಪ್ರಜಾಸತ್ತಾತ್ಮಕ ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೊಳಿಸಬೇಕೆಂದು ಒತ್ತಾಯಿಸಿರುವ ಸಮ್ಮೇಳನ ಜನವಿರೋಧಿ ಶಿಕ್ಷಣ ನೀತಿಯ ಕರಾಳ ಜಾರಿಯನ್ನು ಎಲ್ಲಾಹಂತಗಳಲ್ಲೂ ಹಿಮ್ಮೆಟ್ಟಿಸಬೇಕೆಂದು ಕರೆ ನೀಡಿದೆ.



ಕೇರಳ: ಎಲ್.ಡಿ.ಎಫ್. ಬೇಡಿಕೆಗಳಿಗೆ ಬೆಂಬಲ

ಕೇರಳದ ಎಡ ಪ್ರಜಾಪ್ರಭುತ್ವ ರಂಗ ಕೇಂದ್ರದ ಪಕ್ಷಪಾತ ನೀತಿಗಳನ್ನು ವಿರೋಧಿಸಿ ನಡೆಸಿರುವ ಚಳುವಳಿಗೆ ಮತ್ತು ಎಲ್.ಡಿ.ಎಫ್‌ನ ಬೇಡಿಕೆಗಳಿಗೆ ಸೌಹಾರ್ದ ಬೆಂಬಲ ಸೂಚಿಸಿ, ಅದರ ಜಾತ್ಯಾತೀತ ನಿಲುವನ್ನು ಅಭಿನಂದಿಸುತ್ತಾ ಈ ಕೆಳಗಿನ ನಿರ್ಣಯವನ್ನು ಅಂಗೀಕರಿಸಿದೆ.

"ಕೇರಳವು ಭಾರತದ ಪ್ರಜಾಪ್ರಭುತ್ವದ ಮುಂದುವರಿದ ಕಾವಲು ನೆಲೆಗಳಲ್ಲಿ ಒಂದಾಗಿದೆ. 1987ರ ಮಾರ್ಚ್ ತಿಂಗಳಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಸಿ.ಪಿ.ಐ(ಎಂ) ನೇತೃತ್ವದ ಎಡ ಪ್ರಜಾಪ್ರಭುತ್ವ ರಂಗವು, ಕೋಮುವಾದಿ, ಜಾತಿಯವಾದಿ ಪಕ್ಷಗಳೊಂದಿಗೆ ಕಾಂಗ್ರೆ ಕೂಡಿಕೊಂಡು ರಚಿಸಿದ್ದ ಸಂಯುಕ್ತ ಪ್ರಜಾಸತ್ತಾತ್ಮಕ ರಂಗವನ್ನು ಸೋಲಿಸಿ ಅಧಿಕಾರಕ್ಕೆ ಬಂದಿತು. ಕಾಂಗ್ರೆ-ಆರ್.ಎಸ್.ಎಸ್. ಮುಸ್ಲಿಂ ಕೋಮುವಾದಿಗಳು ಜಾತ್ಯಾತೀತ ನಿಲುವೆಯನ್ನು ತಳೆದಿರುವ ಸಿ.ಪಿ.ಐ(ಎಂ) ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರ ಮೇಲೆ ದೈಹಿಕ ದಾಳಿಗಳನ್ನು ನಡೆಸಿ ಕೆಲವರನ್ನು ಕೊಲೆ ಮಾಡಿದ್ದಾರೆ.

ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆ ಕೇರಳಕ್ಕೆ ಹಣಕಾಸನ್ನು, ಆಹಾರ ಧಾನ್ಯಗಳನ್ನು ಒದಗಿಸಲು ಬೆಳವಣಿಗೆಗೆ ಸಹಾಯಮಾಡುವ ವಿಚಾರಗಳಲ್ಲಿ ಪಕ್ಷಪಾತಗಳನ್ನು ಮಾಡಿ ಎಡ ಪ್ರಜಾಪ್ರಭುತ್ವ ಜಾತ್ಯಾತೀತ ರಂಗದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂತೆ ಮಾಡುತ್ತಿದೆ.

ಕೇರಳದ ಜನಸಂಖ್ಯೆ ಭಾರತದ ಜನಸಂಖ್ಯೆಯ ಶೇ.3.71 ರಷ್ಟಿದ್ದು ಕೇರಳದಲ್ಲಿ ಕೇಂದ್ರದ ಬಂಡವಾಳ ಹೂಡುವಿಕೆಯು 1975 ರಲ್ಲಿ ಶೇ.3.24 ಇದ್ದುದ್ದು 1980ರಲ್ಲಿ 2.33ಕ್ಕೆ ಬಂದು 1986ರಲ್ಲಿ ಶೇ.1.62ಕ್ಕೆ ಇಳಿಯಿತು ರಾಷ್ಟ್ರೀಕೃತ ಬ್ಯಾಂಕ್‌ಗಳು ಇತರ ರಾಜ್ಯಗಳಲ್ಲಿ ಸಂಗ್ರಹಿಸುವ ಠೇವಣಿಗಳ ಶೇ.60 ರಷ್ಟನ್ನು ತೊಡಗಿಸಲು ಸಿದ್ಧವಿಲ್ಲ.

ಕೇರಳದ ಎಲ್ಲಾ ಹಿಂದಿನಿಂದ ಬಂದ ಸಂಪ್ರದಾಯಿಕ ಕೈಗಾರಿಕೆಗಳು ಕಷ್ಟಸ್ಥಿತಿಯಲ್ಲಿವೆ. ಗೇರುಬೀಜ, ತೆಂಗಿನನಾರು, ಕೈಮಗ್ಗ ಕೈಗಾರಿಕೆಗಳಿಗೆ ಜೀವಕೊಡಲು ಸರ್ಕಾರವು ಮಾಡುವ ಪ್ರಯತ್ನಗಳನ್ನು ಕೇಂದ್ರವು ಅಡ್ಡಗಾಲು ಹಾಕಿ ಸೋಲಿಸುತ್ತದೆ.

ಕೇಂದ್ರ ಸರ್ಕಾರವು ಕೇರಳ ಸರ್ಕಾರಕ್ಕೆ ಪ್ರತಿತಿಂಗಳೂ 2ಲಕ್ಷ ಟನ್ ಧಾನ್ಯಗಳನ್ನು ಜುಲೈ-ಆಗಸ್ಟ್ ತಿಂಗಳಲ್ಲಿ ಇದಕ್ಕಿಂತಲೂ ಹೆಚ್ಚು ಧಾನ್ಯಗಳನ್ನು ಸರಭರಾಜು ಮಾಡಬೇಕು. ಆದರೆ ಕೇಂದ್ರವು ಅಗತ್ಯಕ್ಕಿಂತಲೂ ಬಹಳ ಕಡಿಮೆ ಕೊಡುತ್ತಿದ್ದು ಜನರ ಆಹಾರ ವಿಷಯದಲ್ಲಿಯೂ ಪಕ್ಷಪಾತವನ್ನು ತೋರಿಸುತ್ತಿದೆ.

ದೇಶದ ಒಟ್ಟು ರಫ್ತಿನಲ್ಲಿ ಕೇರಳದ ಪಾಲು ಶೇ.10.12ರಷ್ಟಿದೆ. ರಾಜ್ಯದಲ್ಲಿ ಬೆಳವಣಿಗೆಗೆ ಹಣಕಾಸನ್ನು ಕೇಂದ್ರವು ಇದಕ್ಕೆ ಅನುಗುಣವಾಗಿ ಒದಗಿಸುವುದಿಲ್ಲ.

ಈ ಪರಿಸ್ಥಿತಿಯಲ್ಲಿ ಕೇರಳದ ಎಡ ಪ್ರಜಾಪ್ರಭುತ್ವ ರಂಗವು ಕೇಂದ್ರದ ಈ ಪಕ್ಷಪಾತ ಧೋರಣೆಯನ್ನು ಪ್ರತಿಭಟಿಸಿ ನವೆಂಬರ್ 29ರಂದು ನವದೆಹಲಿಯಲ್ಲಿ ಸಂಸತ್ ಸದಸ್ಯರ ಮುಂದೆ ಧರಣಿ ನಡೆಸಿ ಪ್ರಧಾನಮಂತ್ರಿಗೆ ಮನವಿ ಕೊಡಲು ತೀರ್ಮಾನಿಸಿದೆ. ಈ ಧರಣಿಯಲ್ಲಿ ಮುಖ್ಯಮಂತ್ರಿಯ ಹೊರತಾಗಿ ಎಲ್ಲಾ ಮಂತ್ರಿಗಳು ರಾಜ್ಯದ ಶಾಸಕರು ಮತ್ತು ಸಂಸತ್ ಸದಸ್ಯರು ಭಾಗವಹಿಸುತ್ತಾರೆ. ಕೇರಳದಲ್ಲಿ ರಾಜ್ಯಾದ್ಯಂತ ಜೀಪ್ ಜಾತಾಗಳನ್ನು ನಡೆಸಿ ಜನರ ನಡುವೆ ಈ ವಿಚಾರಗಳನ್ನು ಎಡ ಪ್ರಜಾಪ್ರಭುತ್ವ ರಂಗವು ಪ್ರಚಾರ ಮಾಡುತ್ತಿದೆ.

1988 ನವೆಂಬರ್ 27 ರಿಂದ 30ರ ವರೆಗೆ ಬೆಂಗಳೂರಿನಲ್ಲಿ ನಡೆದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮ್ಮೇಳನವು ಕೇರಳದ ಎಡ ಪ್ರಜಾಪ್ರಭುತ್ವ ರಂಗದ ಬೇಡಿಕೆಗಳು ಮತ್ತು ಚಳುವಳಿಗೆ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಿ ಅದರ ಜಾತ್ಯಾತೀತ ನಿಲುಮೆಗೆ ಅದನ್ನು ಅಭಿನಂದಿಸುತ್ತದೆ."

ತ್ರಿಪುರ: ಅರೆಫ್ಯಾಸಿಸ್ಟ್ ದಬ್ಬಾಳಿಕೆ

ವಿಧಾನಸಭಾ ಚುನಾವಣೆ ಪ್ರಚಾರ ಕಾಲದಲ್ಲಿ ಟಿ.ಎನ್.ವಿ. ಭಯೋತ್ಪಾದಕರನ್ನು ಸದೆ ಬಡಿಯಲು ತ್ರಿಪುರಾ ಎಡರಂಗ ಸರ್ಕಾರ ಏನೂ ಮಾಡಿಲ್ಲವೆಂದು ಹೇಳುತ್ತಾ, ಇನ್ನೊಂದೆಡೆ ಅದೇ ಭಯೋತ್ಪಾದಕರ ಮುಖಂಡನೊಂದಿಗೆ ಒಡಂಬಡಿಕೆ ಮಾಡಿಕೊಂಡು ಚುನಾವಣೆಯ ಮೊದಲು ಹಲವಾರು ಅಮಾಯಕ ಕೊಲೆಯಾಗಿ, ಅದನ್ನೇ ನೆವ ಮಾಡಿಕೊಂಡು ಸೇನೆನಿಲ್ಲಿಸಿ ಮೋಸದಿಂದ ಗದ್ದುಗೆ ಯೇರಿದ ತ್ರಿಪುರಾದ ಈಗಿನ ಕಾಂಗ್ರೆಸ್(ಐ) ಟಿ.ಯು.ಜೆ.ಎಸ್.ನ ಸರಕಾರ ನಂತರ, ಚುನಾಯಿತ ಸಂಸ್ಥೆಗಳನ್ನೆಲ್ಲಾ ವಿಸರ್ಜಿಸಿ, ಸಿ.ಪಿ.ಐ.(ಎಂ)ನ ಬೆಂಬಲಿಗರು, ಕಾರ್ಯಕರ್ತರ ಮೇಲೆ, ಸಾಮೂಹಿಕ ಸಂಘಟನೆಗಳ ಮೇಲೆ ಹರಿಯಬಿಟ್ಟಿರುವ ಅರೆಫ್ಯಾಸಿಸ್ಟ್ ಹಿಂಸಾಚಾರವನ್ನು 13ನೇ ಸಮ್ಮೇಳನ ಅಂಗೀಕರಿಸಿದ ಒಂದು ಠರಾವಿನಲ್ಲಿ ಕಟುವಾಗಿ ಟೀಕಿಸಲಾಗಿದೆ.

ಅರೆ-ಫ್ಯಾಸಿಸ್ಟ್ ದಬ್ಬಾಳಿಕೆಯನ್ನು ಹರಿಬಿಟ್ಟು, ಭಯೋತ್ಪಾದಕ ದಬ್ಬಾಳಿಕೆಯನ್ನು ನಡೆಸಿಯೂ ಸಹ ಕಾಂಗ್ರೆಸ್(ಐ) ಟಿ.ಯು.ಜೆ.ಎಸ್. ಸರ್ಕಾರಕ್ಕೆ ತ್ರಿಪುರದ ಜನತೆಯ ನೈತಿಕ ಸ್ಥೈರ್ಯವನ್ನು ಕುಗ್ಗಿಸಲು ಸಾಧ್ಯವಾಗಿಲ್ಲ.

ನವದೆಹಲಿಯಲ್ಲಿ ಅಕ್ಟೋಬರ್ 26ರಂದು ಸಿ.ಪಿ.ಐ(ಎಂ) ದೆಹಲಿ ರಾಜ್ಯ ಸಮಿತಿಯ ಏರ್ಪಡಿಸಿದ್ದ ಸಮಾವೇಶದಲ್ಲಿ ಸಿ.ಪಿ.ಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ನಂಬೂದಿರಿಪಾದ್, ಸಿ.ಪಿ.ಐ ಪ್ರಧಾನ ಕಾರ್ಯದರ್ಶಿ. ರಾಜೇಶ್ವರ ರಾವ್ ಜನತಾ ದಳದ ಅಧ್ಯಕ್ಷ ವಿ.ಪಿ.ಸಿಂಗ್, ಲೋಕದಳದ ಅಧ್ಯಕ್ಷ ಎಚ್.ಎನ್.ಬಹುಗುಣ, ಕಾಂಗ್ರೆಸ್ (ಎಸ್) ಅಧ್ಯಕ್ಷ ಶರತ್ ಚಂದ್ರ ಸಿಂಹ ತೆಲುಗು ದೇಶಂ ಪಕ್ಷದ ವಿ.ಮೋಹನ ರೆಡ್ಡಿ, ಎಸ್.ಪಿ. ಮಾಳವಿಯ ಎಂ.ಪಿ. ಮೊದಲಾದ ಮುಖಂಡರು ಮಾತನಾಡಿ ತ್ರಿಪುರದ ಭಯೋತ್ಪಾದಕ ಆಡಳಿತೆಯ ವಿರುದ್ಧ ವಿರೋಧ ಪಕ್ಷಗಳು ಐಕ್ಯ ಹೋರಾಟವನ್ನು ನಡೆಸಬೇಕೆಂದು ಕರೆ ನೀಡಲಾಗಿದೆ.

ತ್ರಿಪುರದಲ್ಲಿ ಪ್ರಜಾಪ್ರಭುತ್ವದ ಮೇಲೆ ನಡೆದಿರುವ ಆಕ್ರಮಣವು ಇಡೀ ಭಾರತ ದೇಶದ ಪ್ರಜಾಪ್ರಭುತ್ವದ ಮೇಲೆ ನಡೆಸಿರುವ ಆಕ್ರಮಣವಾಗಿದೆ. ಇದರ ವಿರುದ್ಧವಾಗಿ ಪ್ರಜಾಪ್ರಭುತ್ವ ಪ್ರೇಮಿಗಳೆಲ್ಲರು ಐಕ್ಯವಾಗಿ ಹೋರಾಡಬೇಕು ಎಂದು ಕರೆ ನೀಡಿರುವ 13ನೇ ಸಮ್ಮೇಳನ ತ್ರಿಪುರದಲ್ಲಿ ನಡೆಯುತ್ತಿರುವ ಅರೇಫ್ಯಾಸಿಸ್ಟ್ ಭಯೋತ್ಪಾದಕ ದಬ್ಬಾಳಿಕೆಯನ್ನು ಕಟುವಾಗಿ ಖಂಡಿಸಿ ಹೋರಾಡುತ್ತಿರುವ ತ್ರಿಪುರಾದ ಜನತೆಯೊಂದಿಗೆ ಸೌಹಾರ್ದ ಬೆಂಬಲವನ್ನು ವ್ಯಕ್ತಪಡಿಸಿ, ತ್ರಿಪುರಾ ಹೋರಾಟನಿಧಿಗೆ ಪಕ್ಷದ ಪ್ರತಿಯೊಂದು ಶಾಖೆಯು ನಿಧಿ ಸಂಗ್ರಹಿಸಬೇಕೆಂದು ಕರೆ ಕೊಡುತ್ತಾ,

1) ತ್ರಿಪುರದ ಮೇಲೆ ಕೇಂದ್ರ ಸರ್ಕಾರವು ಹೇರಿರುವ ಗಲಭೆಪೀಡಿತ ಪ್ರದೇಶ ಎಂಬ ಘೋಷಣೆಯನ್ನು ವಾಪಸ್ಸು ತೆಗೆದುಕೊಂಡು, ಸೈನ್ಯವನ್ನು ವಾಪಸ್ಸು ಕರೆಸಿಕೊಳ್ಳಬೇಕೆಂದು,

2) ಅಮಾನುಷ ಕೊಲೆ, ದಬ್ಬಾಳಿಕೆ, ಮಹಿಳೆಯರ ಮಾನಭಂಗಕ್ಕೆ ಮುಖ್ಯ ಕಾರಣರಾಗಿರುವ ಮುಖ್ಯಮಂತ್ರಿ ಸುಧೀರ್ ರಂಜನ್ ಮುಂಜೂದಾರ್, ಗೃಹ ಮಂತ್ರಿ ಸಮಿರಂಜನ್ ಬರ್ಮನ್, ರಾಜೀನಾಮೆ ಕೊಡಬೇಕೆಂದು.

3) ಉಜಾನ್ ಮೈದಾನದಲ್ಲಿ ನಡೆದಿರುವ ಗಿರಿಜನ ಮಹಿಳೆಯರ ಸಾಮೂಹಿಕ ಮಾನಭಂಗದ ಗುರುತು ನ್ಯಾಯಾಂಗ ವಿಚಾರಣೆ ನಡೆಸಬೇಕು, ಮಾನಭಂಗಕ್ಕೆ ಗುರಿಯಾಗಿರುವವರೆಲ್ಲರಿಗೂ ನ್ಯಾಯ ದೊರೆಯಬೇಕು, ಎಲ್ಲಾ ಕೊಲೆ ಮೊದಲಾದ ದುಷ್ಕೃತ್ಯಗಳನ್ನೆಸಗಿರುವವರನ್ನೂ ದಂಡಿಸಬೇಕು, ಸುಳ್ಳು ಕ್ರಿಮಿನಲ್ ಕೇಸುಗಳನ್ನೆಲ್ಲ ವಾಪಸ್ಸು ತೆಗೆದುಕೊಳ್ಳಬೇಕು, ಪೊಲೀಸ್ ಲಾಕಪ್‌ಗಳಲ್ಲಿ ನಡೆಯುತ್ತಿರುವ ಚಿತ್ರಹಿಂಸೆ ನಿಲ್ಲಬೇಕು, ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಮೇಲೆ ನಡೆಯುತ್ತಿರುವ ಆಕ್ರಮಣ ನಿಲ್ಲಬೇಕು. ಸಶಸ್ತ್ರ ಪಡೆಗಳು ಆಕ್ರಮಿಸಿಕೊಂಡಿರುವ ಆಫೀಸುಗಳನ್ನೆಲ್ಲ ತೆರವು ಮಾಡಬೇಕು. ಮೆರವಣಿಗೆ ಸಭೆಗಳ ಮೇಲೆ ನಡೆಯುತ್ತಿರುವ ದಾಳಿ ನಿಲ್ಲಬೇಕು. ಎಡಂಗದ ಬೆಂಬಲಿಗರ ಮನೆಗಳನ್ನುಲೂಟಿ ಮಾಡುವುದು, ಸುಡುವುದು ನಿಲ್ಲಬೇಕು. ತ್ರಿಪುರದಲ್ಲಿ ಪ್ರಜಾಪ್ರಭುತ್ವವನ್ನು, ವ್ಯಕ್ತಿ ಸ್ವಾತಂತ್ರವನ್ನು ಪುನರ್ ಸ್ಥಾಪನೆಗೊಳಿಸಬೇಕು, ಹೊಸ ಚುನಾವಣೆಗಳನ್ನು ನಡೆಸುವ ಮೂಲಕ ವಿಸರ್ಜಿಸಲ್ಪಟ್ಟ ಎಲ್ಲಾ ಚುನಾಯಿತ ಸಂಸ್ಥೆಗಳನ್ನು ಪುನರ್ ರಚಿಸಬೇಕೆಂದು ಆಗ್ರಹಪಡಿಸಿದೆ. ಮತ್ತು ಈ ಬೇಡಿಕೆಗಳಿಗಾಗಿ ಐಕ್ಯ ಚಳುವಳಿ ನಡೆಸಲು ರಾಜ್ಯದ ಪ್ರಜಾಪ್ರಭುತ್ವ ಪಕ್ಷಗಳಿಗೆ, ಶಕ್ತಿಗಳಿಗೆ, ವ್ಯಕ್ತಿಗಳಿಗೆ, ಮನವಿ ಮಾಡಿಕೊಂಡಿದೆ.

> ಪಾರ್ಟಿ ಶಾಲೆಗಳ ಬೇಡಿಕೆ ಸರಿಯಾದದ್ದೇ. ಆದರೆ ಕೇವಲ ಪಾರ್ಟಿ ಶಾಲೆಗಳಿಂದಲೇ ಕಮ್ಯುನಿಸ್ಟರಾಗುವುದು ಸಾಧ್ಯವಿಲ್ಲ. ರಾಜ್ಯ ಸಮಿತಿ ಸದಸ್ಯರು, ಸೆಕ್ರೆಟಾರಿಯೆಟ್ ಸದಸ್ಯರು, ಪಾಲಿಟ್‌ಬ್ಯೂರೋ ಸದಸ್ಯರು ಸರ್ವಜ್ಞಾನ ಹೊಂದಿರುವ ಒಂದು ಹೊಸ ಬ್ರಾಹ್ಮಣ ಕಮ್ಯುನಿಸ್ಟ್ ವರ್ಗ, ಅವರ ಉಪದೇಶಪಡೆದು ಮೋಕ್ಷಗಳಿಸಬಹುದು ಎಂದು ಹಲವರು ಭಾವಿಸಿದಂತಿದೆ. ಪಾರ್ಟಿ ಶಾಲೆ ನೆರವು ನೀಡಬಹುದಷ್ಟೇ. ಜತೆಗೆ ಸ್ವಂತ ಅಧ್ಯಯನದ ಆಕಾಂಕ್ಷೆಯಿಲ್ಲದಿದ್ದರೆ ಯಾರೂ ಕಮ್ಯುನಿಸ್ಟನಾಗುವುದು ಸಾಧ್ಯವಿಲ್ಲ.
>
> —ಬಿ.ಟಿ.ಆರ್

ಪಂಜಾಬ್ ಸಮಸ್ಯೆ ಪರಿಹರಿಸುವಲ್ಲಿ ವಿಫಲತೆ

ದೇಶದ ಆಯಕಟ್ಟಿನ ಜಾಗದಲ್ಲಿರುವ ಪಂಜಾಬಿನಲ್ಲಿ ಪ್ರತಿದಿನ ನೂರಾರು ನಿರಪರಾಧಿಗಳು ಭಯೋತ್ಪಾದಕರ ಗುಂಡಿಗೆ ಬಲಿಯಾಗುತ್ತಿದ್ದಾರೆ. ರಾಜೀವ ಗಾಂಧಿ ಲೋಂಗೋವಾಲ್ ನಡುವೆ ಸಂಗತಾರ್ಹ ಒಪ್ಪಂದವಾದರೂ ಅದನ್ನ ಕಾಂಗ್ರೆಸ್(ಐ) ಸರ್ಕಾರ ಸಂಕುಚಿತ ದೃಷ್ಟಿಯಿಂದ ಜಾರಿಗೊಳಿಸದೇ ಇದ್ದುದರಿಂದ ಪಂಜಾಬ್ ಸಮಸ್ಯೆ ಇನ್ನೂ ಪರಿಹಾರ ಕಾಣದಾಗಿದೆ ಎಂದು 13ನೇ ಸಮ್ಮೇಳನ ಅಭಿಪ್ರಾಯಪಟ್ಟಿದೆ.

ಪ್ರಾರಂಭದಲ್ಲಿ ಧರ್ಮದಿಂದ ಬಹಿಷ್ಕರಿಸುವ ಭಯೋತ್ಪಾದಕರ ಬೆದರಿಕೆಗೆ ಮಣಿದ ಅಕಾಲಿ ಮುಖಂಡ ಪಂಜಾಬಿನ ಮುಖ್ಯಮಂತ್ರಿ ಸರ್ಜಿತ್‌ಸಿಂಗ್ ಬರ್ನಾಲ ಅವರು ಎಡ ಮತ್ತು ಪ್ರಜಾಪ್ರಭುತ್ವ ಚಳುವಳಿಯಿಂದ ಧೈರ್ಯ ಪಡೆದು ಭಯೋತ್ಪಾದಕರನ್ನು ಎದುರಿಸಲು ಪ್ರಾರಂಭ ಮಾಡಿದಾಗ ರಾಜೀವ್ ಗಾಂಧಿ ಅವರ ಸರ್ಕಾರವನ್ನು ವಿಸರ್ಜಿಸಿ ರಾಷ್ಟ್ರಾಧ್ಯಕ್ಷರ ಆಡಳಿತ ಹೇರಿದ್ದನ್ನು ಸಿ.ಪಿ.ಐ.(ಎಂ) ಖಂಡಿಸುತ್ತದೆ. ಮಿಲಿಟರಿ ಬಲದಿಂದ ಭಯೋತ್ಪಾದಕರನ್ನು ಹುಗ್ಗಿಸುತ್ತೇವೆಂದು ಸಾರುತ್ತಿದ್ದರೂ ಅವರ ದಿನಂದಿನ ಚಟುವಟಿಕೆ ಹೆಚ್ಚುತ್ತಿರುವ ಕೇಂದ್ರ ಸರ್ಕಾರದ ನೀತಿಯನ್ನು ಬಯಲುಗೊಳಿಸಿದೆ ಎಂದು ಸಮ್ಮೇಳನ ಅಂಗೀಕರಿಸಿದ ಒಂದು ಠರಾವಿನಲ್ಲಿ ಹೇಳಲಾಗಿದೆ.

ಭಯೋತ್ಪಾದಕರಿಗೆ ಅಮೇರಿಕನ್ ಸಾಮ್ರಾಜ್ಯಶಾಹಿ ಸರ್ವ ವಿಧದ ಸಹಾಯ ಮಾಡುತ್ತಿವೆಂದು ಗೊತ್ತಿದ್ದೂ ರಾಜೀವ ಗಾಂಧಿ ಅವರ ಕೃತ್ಯವನ್ನು ಖಂಡಿಸುತ್ತಿಲ್ಲ. ಭಯೋತ್ಪಾದಕರನ್ನೆದುರಿಸಲು ಸಿದ್ಧರಿರುವ ಶಕ್ತಿಗಳನ್ನು ಸಿ.ಪಿ.ಐ. (ಎಂ) ಮತ್ತಿತರ ಎಡ-ಪ್ರಜಾಪ್ರಭುತ್ವ [illegible]

ಖಲಿಸ್ತಾನವಾದಿಗಳನ್ನು ಪ್ರತ್ಯೇಕಿಸದೇ ಅಕಾಲಿ ದಳದಲ್ಲಿಯ ಪಂಜಾಬ್ ಸಮಸ್ಯೆ ಪರಿಹರಿಸಲಾರದ ಪಂಥವಾದಿಗಳ, ಪ್ರತಿಗಾಮಿಗಳ ಜೊತೆ ಸಂಧಾನ ನಡೆಸುತ್ತಿರುವುದನ್ನು ಭಯೋತ್ಪಾದಕತೆ ಜಾಸ್ತಿಯಾಗಲು ಪ್ರೋತ್ಸಾಹ ನೀಡುತ್ತಿರುವ ರಾಜೀವ್ ಗಾಂಧಿಯವರ ನೀತಿಯನ್ನು ಠರಾವು ಖಂಡಿಸುತ್ತದೆ.

ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರ ಒದಗಿಸಬೇಕೆಂದೂ, ಚಂಡೀಗಡವನ್ನು ಪಂಜಾಬಿಗೆ ಒಪ್ಪಿಸಿ, ಸುಪ್ರಿಂ ಕೋರ್ಟ್ ನ್ಯಾಯಾಧೀಶರಿಂದ ಗಡಿ ಮತ್ತು ನೀರಿನ ಸಮಸ್ಯೆ ಬಗೆಹರಿಸಬೇಕೆಂದೂ ಜೋಧಪುರ ಜೈಲಿನಲ್ಲಿ ಬಂಧನದಲ್ಲಿಟ್ಟಿರುವ ನಿರಪರಾಧಿ ಸಿಕ್ಕರನ್ನು ಬಿಡುಗಡೆ ಮಾಡಬೇಕೆಂದೂ 1984ರಲ್ಲಿ ಇಂದಿರಾಗಾಂಧಿಯವರ ಕೊಲೆಯಾದ ನಂತರ ದಿಲ್ಲಿಯಲ್ಲಿ ಸಿಖ್ ಜನರ ಮೇಲೆ ದೌರ್ಜನ್ಯದಲ್ಲಿ ಸೆರೆ ಹಿಡಿಯಲ್ಪಟ್ಟು ಸರಕಾರ ನೇಮಿಸಿದ ಆಯೋಗದಿಂದ ತಪ್ಪುಗಾರರೆಂದು ನಿರ್ಣಯಿಸಲ್ಪಟ್ಟವರಿಗೆ ಶಿಕ್ಷೆಕೊಡಬೇಕೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡುತ್ತ ಬಂದಿದೆ. ಅಮೇರಿಕದ ಕೈವಾಡವನ್ನು ಬಯಲಿಗೆಳೆಯಬೇಕೆಂದೂ ಹೇಳಿದೆ. ಎಲ್ಲ ಎಡ ಜಾತ್ಯಾತೀತ ಪಕ್ಷಗಳ ಬೆಂಬಲದಿಂದ ಪಂಜಾಬಿನಲ್ಲಿ ತೀವ್ರ ಪ್ರಚಾರ ಪ್ರಕ್ಷೋಭೆ ನಡೆಸಿ ಭಯೋತ್ಪಾದಕರನ್ನು ಜನರಿಂದ ಪ್ರತ್ಯೇಕಿಸಬೇಕೆಂದು ಒತ್ತಾಯ ಮಾಡುತ್ತಾ ಬಂದಿದೆ.

ತಾನು ಸ್ವತಂತ್ರವಾಗಿಯೂ ಇತರ ಎಡ ಪಕ್ಷಗಳೊಡನೆ ಕೂಡಿಕೊಂಡು ಭಯೋತ್ಪಾದಕರ ವಿರುದ್ಧ ನಿರಂತರ ಹೋರಾಟ ನಡೆಸುತ್ತಾ ಬಂದಿದೆ ಸಿಪಿಐ(ಎಂ) ಪಕ್ಷ ಮತ್ತು ಅದರ ನೇತೃತ್ವದ ಸಾಮೂಹಿಕ ಸಂಘಟನೆಗಳು. ಅದರ ಪರಿಣಾಮವಾಗಿ ಪಕ್ಷದ ವಿದ್ಯಾರ್ಥಿ ಯುವಜನ ಸಂಘಟನೆಯ ಅನೇಕ ಕಾರ್ಯಕರ್ತರು ಮುಖಂಡರು, ಭಯೋತ್ಪಾದಕರಿಂದ ಕೊಲೆ ಮಾಡಲ್ಪಟ್ಟರು. ದೇಶದ ಐಕ್ಯತೆ ಸಮಗ್ರತೆಗಾಗಿ ಹೋರಾಡಿ ಜೀವತೆತ್ತ ಈ ವೀರರಿಗೆ ಈ ಸಮ್ಮೇಳನ ತನ್ನ ಶ್ರದ್ಧಾಂಜಲಿಯನ್ನರ್ಪಿಸಿತು.

ಈ ಸಂದರ್ಭದಲ್ಲಿ ಡಾರ್ಜಿಲಿಂಗ್ ಸಮಸ್ಯೆಯ ಪರಿಹಾರದತ್ತ ಗಮನ ಸೆಳೆದ ಈ ಠರಾವು ಹೇಗೆ ಮಾತುಕತೆಯ ಮೂಲಕ ರಾಜಕೀಯ ಪರಿಹಾರ ಕಂಡುಕೊಳ್ಳುವುದು ಸಾಧ್ಯ ಎಂಬುದಕ್ಕೆ ಒಂದು ಉದಾಹರಣೆ ಕೊಟ್ಟಿದೆ.

ಪಶ್ಚಿಮ ಬಂಗಾಳದ ಸಿಪಿಐ(ಎಂ) ಮುಖಂಡತ್ವ ಕಾ: ಜ್ಯೋತಿಬಸು ನೇತೃತ್ವದ ಎಡರಂಗ ಸರ್ಕಾರ ಗೋರ್ಖಾಲ್ಯಾಂಡ್ ಪ್ರಶ್ನೆಯನ್ನು ಸಮರ್ಪಕವಾಗಿ ಬಗೆಹರಿಸಿ ಡಾರ್ಜಿಲಿಂಗ್‌ನಲ್ಲಿ ಶಾಂತಿ ಸೌಹಾರ್ದತೆ ನೆಲೆಸುವಂತೆ ಮಾಡಿದ್ದಾರೆ.

ರಾಜಕೀಯ ಪರಿಹಾರದ ಮೂಲಕ ಮಾತ್ರ ಗೂರ್ಖಾಲ್ಯಾಂಡ್ ಸಮಸ್ಯೆ ಬಗೆಹರಿಸಲು ಸಾಧ್ಯವೆಂಬ ದೃಢನಿಲುಮೆ ಒಂದು ಕಡೆ, ಅದೇ ಸಮಯದಲ್ಲಿ ಜನಜಾಗೃತಿಗೊಳಿಸಿ ಅವರೆಲ್ಲರ ಸಹಾಯದಿಂದ ಸುಭಾಷ್ ಗೈಸಿಂಗನ ಬೆಂಬಲಿಗರ ಹಿಂಸಾಕೃತ್ಯಗಳನ್ನು ಧೈರ್ಯದಿಂದ ಎದುರಿಸುವ ಕ್ರಮಕೈಗೊಂಡದ್ದರಿಂದ ಪ.ಬಂಗಾಲದ ಎಡರಂಗ ಸರ್ಕಾರ ಯಾರಿಗೂ ಮಣಿಯದೆ ಸಮರ್ಪಕವಾಗಿ ಪರಿಹಾರ ಒದಗಿಸುವ ಮೂಲಕ ಛಿದ್ರಕಾರಿ ಚಟುವಟಿಕೆಯನ್ನು ಸೋಲಿಸಿದ್ದಾರೆ.

ರಾಜೀವ್ ಗಾಂಧಿಯವರು ಸುಭಾಷ್ ಗೈಸಿಂಗನ ಮೂಲಕ ಪ್ರತ್ಯೇಕ ಗುರ್ಖಾ ರಾಜ್ಯಕ್ಕಾಗಿ ಡಾರ್ಜಿಲಿಂಗ್‌ನಲ್ಲಿ ಹಿಂಸಾಕೃತ್ಯದಲ್ಲಿ ತೊಡಗಿದ್ದರೆ, ಎಡರಂಗ ಸರಕಾರ ತನ್ನ ದೃಢ ರಾಜಕೀಯ ನಿಲುಮೆಯಿಂದ ಅದಕ್ಕೆ ಯೋಗ್ಯ ಪರಿಹಾರ ಕಂಡು ಹಿಡಿದಿದ್ದಾರೆ.

ಆದರೆ ರಾಜೀವ ಗಾಂಧಿಯವರು ಪಂಜಾಬ್ ಸಮಸ್ಯೆಗೆ ಅಂಥ ದೃಢವಾದ ರಾಜಕೀಯ ಪರಿಹಾರ ಒದಗಿಸದೆ ಬರೇ ತನ್ನ ಪಕ್ಷದ ಅಧಿಕಾರ ಸ್ಥಾಪಿಸುವ ದುರುದ್ದೇಶದಿಂದ ಭಯೋತ್ಪಾದಕರಿಗೆ ಮಣಿಯುತ್ತಾ ಆ ಸಮಸ್ಯೆ ನನೆಗುದಿಗೆ ಬೀಳುವಂತೆ ಮಾಡಿ, ನಿರಪರಾಧಿಗಳ ಹತ್ಯೆಗೂ ಹಿಂದೂ-ಸಿಕ್ಕರೊಳಗೆ ದ್ವೇಶಕ್ಕೂ ಅವಕಾಶ ಮಾಡಿಕೊಟ್ಟು, ದೇಶದ ಐಕ್ಯತೆ ಸಮಗ್ರತೆಗೆ ಧಕ್ಕೆ ಉಂಟುಮಾಡುತ್ತಿದ್ದಾರೆ. ರಾಜೀವ್‌ಗಾಂಧಿಯವರ ಅಂಥ ಅಪಾಯಕಾರಿ ನೀತಿಯನ್ನು ಸಮ್ಮೇಳನ ಬಲವಾಗಿ ಖಂಡಿಸಿತು.

ದೇಶದ ಸಮಗ್ರತೆಯನ್ನೂ ಐಕ್ಯತೆಯನ್ನೂ ಕಾಪಾಡಲು ಜಾತೀಯ ಸೌಹಾರ್ದತೆಯನ್ನು ಉಳಿಸಲು ಭಯೋತ್ಪಾದಕರನ್ನು ಪ್ರತ್ಯೇಕಿಸುವುದರ ಮೂಲಕ ಅಮೇರಿಕನ್ ಸಾಮ್ರಾಜ್ಯ ಶಾಹಿಯ ಪಾಕಿಸ್ತಾನದ ಕುತಂತ್ರವನ್ನು ಬಯಲಿಗೆಳೆಯಲು ಜೀವದ ಹಂಗು ತೊರೆದು ಹೋರಾಡುತ್ತಿರುವ ಪಂಜಾಬಿನ ಜನತೆಗೂ ಸಿಪಿಐ(ಎಂ) ಪಕ್ಷ 13ನೇ ರಾಜ್ಯ ಸಮ್ಮೇಳನ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತಾ ಅವರನ್ನು ಅಭಿನಂದಿಸುತ್ತದೆ. ಯಾವ ಉದ್ದೇಶದ ಸಲುವಾಗಿ ಅವರು ಧೀರ ಹೋರಾಟ ನಡೆಸುತ್ತಿದ್ದಾರೊ ಆ ಉದ್ದೇಶವನ್ನು ನಾವು ಎತ್ತಿ ಹಿಡಿಯುತ್ತೇವೆ; ಅದರ ಸಲುವಾಗಿ ಸತತ ಹೋರಾಡುತ್ತೇವೆ ಎಂಬ ಆಶ್ವಾಸನೆಯನ್ನು ಈ ಸಮ್ಮೇಳನ ಪಂಜಾಬಿನ ಸಂಗಾತಿಗಳಿಗೂ, ಜನತೆಗೂ ಈ ಠರಾವಿನ ಮೂಲಕ ನೀಡಿದೆ.

ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

'ಐಕ್ಯರಂಗ'ದ ನಿರ್ವಹಣೆಯನ್ನು ಸುವ್ಯವಸ್ಥಿತಗೊಳಿಸುವ ಉದ್ದೇಶದಿಂದ ಪತ್ರಿಕೆಯ ನಿರ್ವಹಣಾ ಕಚೇರಿಯನ್ನು ಈ ಕೆಳಗಿನ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ. ಏಜೆನ್ಸಿದಾರರು, ಚಂದಾದಾರರು ತಮ್ಮ ಏಜೆನ್ಸಿ/ಚಂದಾ ಬಗ್ಗೆ ವಿಚಾರಣೆ, ಹಣಪಾವತಿಗೆ ಇನ್ನು ಮುಂದೆ ಈ ವಿಳಾಸದೊಂದಿಗೆ ವ್ಯವಹರಿಸಬೇಕಾಗಿ ಕೋರುತ್ತೇವೆ.

c/o ಕ್ರಿಯಾ ಪ್ರಕಾಶನ ಪ್ರೈ. ಲಿಮಿಟೆಡ್
ನಂ.24, ಶೋಭ ಲಾಡ್ಜ್ ಕಾಂಪ್ಲೆಕ್ಸ್
5 ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು-560009

1ನೇ ಪುಟದಿಂದ

ಜಾತಿವಾದಿಗಳನ್ನು, ಮೂಲಭೂತವಾದಿಗಳನ್ನು ಎದುರಿಸುವಲ್ಲಿ ಕಾಂಗ್ರೆ ವಿಫಲವಾಗಿದೆ. ಆದ್ದರಿಂದಾಗಿ ದೇಶದ ಏಕತೆ, ಸಮಗ್ರತೆ ಉಳಿಸಲು ಪ್ರತಿಪಕ್ಷ ಹೋರಾಡಬೇಕಾಗಿದೆ ಎಂದರು.

ಕಾಂಗ್ರೆ ಬಡತನ ವಿರೋಧಿ ಕಾರ್ಯಕ್ರಮಗಳನ್ನೇ ಹಮ್ಮಿಕೊಳ್ಳುತ್ತಾ ಬಂದಿದೆ. ಹರಿಜನ, ಗಿರಿಜನರ ಅಭಿವೃದ್ಧಿ ಎಂದು ಹೇಳುತ್ತಾ ಉತ್ತರಪ್ರದೇಶದಲ್ಲಿ ಕೃಷಿ ಮಾಡಲು ಅವರಿಗೆ ಕೊಟ್ಟಿರುವ ಭೂಮಿ ನೀರಿನಲ್ಲಿ ಮುಳುಗಿರುವ ಕೆರೆ. ಈ ಪರಿಸ್ಥಿತಿ ಹಿಂದೆಯೂ ಇತ್ತು. ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ ಇದೇ ನೀತಿ ನಡೆಸುತ್ತಾ ಬಂದರು.

ಕರ್ನಾಟಕದಲ್ಲಿಯೂ ಜನತಾ ಸರ್ಕಾರ ರೈತರಿಗೆ, ಕೃಷಿ ಕಾರ್ಮಿಕರಿಗೆ ನ್ಯಾಯ ಒದಗಿಸಿದೆ ಎಂದು ಹೇಳಲಾಗುವುದಿಲ್ಲ.

ರಾಜೀವ್‌ಗಾಂಧಿಯವರ ಸರ್ಕಾರ ಹೆಚ್ಚೆಚ್ಚು ಸರ್ವಾಧಿಕಾರ ಮಾರ್ಗಗಳನ್ನು ಅನುಸರಿಸುತ್ತಿದೆ. ತ್ರಿಪುರಾದಲ್ಲಿ ಚುನಾವಣೆಗಳಲ್ಲಿ ಅಕ್ರಮ ನಡೆಸಲಾಯಿತು. ತ್ರಿಪುರಾದ ಹೆಣ್ಣುಮಕ್ಕಳನ್ನು ಅತ್ಯಾಚಾರ ಮಾಡಲಾಯಿತು.

ರಾಮಾಯಣದಲ್ಲಿ ರಾವಣ ಇದ್ದಾನೆ. ರಾವಣ ಹಾಗೂ ರಾಜೀವರನ್ನು ಹೋಲಿಸಿದರೆ ರಾವಣನ ಆಡಳಿತವೇ ಒಳ್ಳೆಯದಿತ್ತು. ಏಕೆಂದರೆ ರಾವಣ ಸೀತೆಯನ್ನು ಕದ್ದುಕೊಂಡು ಹೋದ. ಆದರೆ ಮುಟ್ಟಲಿಲ್ಲ. ಆದೇ ರಾಜೀವರ ಸರ್ಕಾರದಲ್ಲಿ ಕೇವಲ



ಕಾರ್ಯಕ್ರಮದ ಆಧಾರದ ಮೇಲೆ ಕಾಂಗ್ರೆಗೆ ಪ್ರಬಲ ಪರ್ಯಾಯ ತ್ವರಿತ ಗೊಳ್ಳಬೇಕು

13ನೇ ಸಮ್ಮೇಳನ ಬಹಿರಂಗ ಸಭೆಯಲ್ಲಿ ಬಿ.ಟಿ.ಆರ್.



ಆರು ತಾಸು ಪೊಲೀಸ್ ಕಸ್ಟಡಿಯಲ್ಲಿದ್ದರೆ ಏನಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತು ಎಂದರು. ವಿಶ್ವಬ್ಯಾಂಕ್‌ನ ಒತ್ತಾಯಕ್ಕೆ ಮಣಿದು ರಾಜೀವ್‌ಗಾಂಧಿ ಸಾರ್ವಜನಿಕ ಕ್ಷೇತ್ರ ಉದ್ದಿಮೆಗಳನ್ನು ಖಾಸಗೀಯವರಿಗೆ ನೀಡುವ ಸನ್ನಾಹದಲ್ಲಿದ್ದಾರೆ. ಸಾವಿರಾರು ಕೋಟಿ ರೂ.ಗಳ ಸಾಲ ಹೊಂದಿರುವ ಭಾರತ ಇನ್ನು ಐದು ವರ್ಷಗಳಲ್ಲಿ ಸಾಮ್ರಾಜ್ಯಶಾಹಿಗಳು ಬೀಸುವ ಸಾಲದ ಸುಳಿಗೆ ಸಿಕ್ಕುತ್ತದೆ ಎಂದರು.

ಈ ಒತ್ತಡಗಳಿಂದಾಗಿಯೇ ರಾಜೀವ್ ಗಾಂಧಿ ನೂತನ ಶಿಕ್ಷಣ ನೀತಿಯನ್ನು ತಂದಿದ್ದಾರೆ. ಹಳ್ಳಿಗರ ಬಡವರ ಮಕ್ಕಳಿಗೆ ಎಟುಕದ ಈ ಶಿಕ್ಷಣ ನೀತಿ ಕೇವಲ ಶ್ರೀಮಂತರ ಮಕ್ಕಳಿಗೆ ಮಾತ್ರ. ಶ್ರೀಮಂತರಿಗೆ ಮಾತ್ರ ಶಿಕ್ಷಣ ಎನ್ನುವ ನೀತಿ ಬ್ರಾಹ್ಮಣರಿಗೆ ಮಾತ್ರ ಓದು ಎಂದು ಈ ಹಿಂದೆ ಇದ್ದ ಮನುವಿನ ಕಾಲವನ್ನು ನೆನಪು ಮಾಡುತ್ತದೆ ಎಂದರು.

ಆದ್ದರಿಂದ ಈ ಎಲ್ಲಾ ಪರಿಸ್ಥಿತಿಗಳನ್ನು ತ್ರಿವೇಂಡ್ರಂನಲ್ಲಿ ನಡೆಯುವ ರಾಷ್ಟ್ರಸಮ್ಮೇಳನದಲ್ಲಿ ಚರ್ಚಿಸಲಿದ್ದೇವೆ. ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದೇವೆ ಎಂದರು. ಬಿ.ಟಿ.ರಣದಿವೆ ಅವರ ಭಾಷಣವನ್ನು ಬಿ.ಮಾಧವ ಕನ್ನಡಕ್ಕೆ ಭಾಷಾಂತರಿಸಿದರು.

ಸಭೆಯನ್ನು ಸ್ವಾಗತಿಸಿ ಎಸ್.ಸೂರ್ಯನಾರಾಯಣರಾವ್ ಬಸವ ಗುಡಿ ಬಂದ್ ವಿರುದ್ಧ ಬಿರುಸಿನಿಂ ಮಾತನಾಡಿ ಆಧುನಿಕ ಕಸಾಯಿಖಾ ಇಂದು ಅತ್ಯಗತ್ಯವಾದ ಕೆಲಸ. ಆದ ಅದನ್ನು ವಿರೋಧಿಸುವುದರಲ್ಲಿ ಆರ್.ಎಸ್ ಎಸ್.ನವರ ಕೈವಾಡವಿದೆ ಎಂದು ಹೇ ಕಸಾಯಿಖಾನೆ ಸ್ಥಾಪನೆ ಆಗ ಬೇಕೆಂದರು. ಕೈಗಾ ಬೇಡ ಎಂ ಹೇಳುವ ಅಪ್ಪಟ ಪರಿಸರವಾದಿಗಳ ಬಣ್ಣ ಬಯಲು ಮಾಡುತ್ತಾ ಸಾಮ್ರಾ ಶಾಹಿಗಳ ನೆರಳಲ್ಲಿ ಬದುಕುತ್ತಿರುವ ಪರಿಸರವಾದಿಗಳು ಪ್ರಗತಿಯ ಎ ಯೋಜನೆಗಳಿಗೂ ತಡೆ ಹಾಕಲು ಪ್ರಯ ಸುತ್ತಿದ್ದಾರೆ. ಕರ್ನಾಟಕಕ್ಕೆ ಬೆಳ ಹರಿಸಬೇಕಾದರೆ ಕೈಗಾ ಅತ್ಯಂತ ಅಗ ಅದಕ್ಕಾಗಿ ಡಿಸೆಂಬರ್ 20ರಂದ ರಾಜ್ಯಾದ್ಯಂತ 'ಕೈಗಾದಿನ'ವನ್ನಾಗಿ ಆಚರಿ ಲಿದ್ದೇವೆ ಎಂದರು.

ಕಾಂ.ಸಿ.ನಂಜುಂಡಪ್ಪ ಸಭೆ ಸಮ್ಮೇಳನದಲ್ಲಿ ಆಯ್ಕೆಯಾದ ರಾ ಸಮಿತಿ ಸದಸ್ಯರನ್ನು ಪರಿಚಯ ಮಾ ಕೊಟ್ಟರು. ಪಿ.ರಾಮಚಂದ್ರರಾವ್ ಅಧ್ಯಕ್ಷ ವಹಿಸಿದ್ದರು. ಆರಂಭದಲ್ಲಿ ಎಚ್.ಎನ್ ನಾಗಮೋಹನದಾಸ್ ಸ್ವಾಗತಭಾಷಣ ಮಾ ದರು. ಗೋಪಾಲಗೌಡ ವಂದನಾರ್ಪ ಮಾಡಿದರು.







ಸಂಪಾದಕೀಯ

1ನೇ ಪುಟದಿಂದ

ಮಹಾಧಿವೇಶನದಲ್ಲಿ ಕೊಟ್ಟಿತ್ತು. ಈ ಎಚ್ಚರಿಕೆಯನ್ನು ಇಲ್ಲಿ ಕಡೆಗಣಿಸಲಾಗಿತ್ತು. ಇದನ್ನು ಕೇಂದ್ರ ಸಮಿತಿ 'ಕಮಿಶನ್' ಮೂಲಕ ಸಾಬೀತುಪಡಿಸಿದ್ದರಿಂದ ಪಕ್ಷದಲ್ಲಿ ಕೆಲವೊಂದು ಬದಲಾವಣೆಗಳು ಅನಿವಾರ್ಯವಾಯಿತು.

ಆ ನಂತರ ಪಕ್ಷದ 12ನೇ ಸಮ್ಮೇಳನ ಕೆ.ಜಿ.ಎಫ್‌ನಲ್ಲಿ ನಡೆಯಿತು. ಅಲ್ಲಿ ಪುನರ್ ನವೀಕರಿಸಲ್ಪಟ್ಟ ಸಮಿತಿಯು ಕೆಲಸ ಮಾಡುತ್ತಾ ಬಂದು 12ನೇ ಅಧಿವೇಶನದ ತೀರ್ಮಾನಗಳನ್ನು ಹಾಗೂ ಆಮೇಲೆ ಪಕ್ಷವು ಇತರ ಎಡಪಕ್ಷಗಳ ಜತೆಗೂಡಿ ಹಾಕಿಕೊಂಡು ಬಂದ ಎಲ್ಲಾ ಕಾರ್ಯಕ್ರಮಗಳಲ್ಲಿ ಪಕ್ಷವು ಚುರುಕಾಗಿ ಕೆಲಸ ಮಾಡುತ್ತಾ ಬಂದು ಮಜದೂರ್-ಕಿಸಾನ್ ಜಾತಾ, ಉಪ-ಜಾತಾಗಳು, ದೆಹಲಿ ರ್‍ಯಾಲಿ ಮಾರ್ಚ್ ಬಂದ್, ಸೆಪ್ಟೆಂಬರ್ 1-13, 1987 ಮತ್ತು ಸೆಪ್ಟೆಂಬರ್ 1-15 ,1988ರ ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲಭಾರತ ಕೃಷಿಕೂಲಿಗಾರರ ಸಂಘಟನೆಗಳು ಜಂಟಿಯಾಗಿ ನಡೆಸಿದ ರೈತ ಕೃಷಿ ಕೂಲಿಗಾರರ ಹೋರಾಟಗಳು ಇವುಗಳಲ್ಲಿ ಪ್ರಮುಖ. ಸಾರ್ವಜನಿಕ ಕ್ಷೇತ್ರದ ಮಹತ್ತರವಾದ ಸಮ್ಮೇಳನವನ್ನು ಬೆಂಗಳೂರಿನಲ್ಲಿ ನಡೆಸಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಹೋರಾಟಕ್ಕೆ ದೇಶದಾದ್ಯಂತ ಒಂದು ಉತ್ತೇಜನೆ ದೊರೆಯಿತು. ಐ.ಟಿ.ಸಿ ಕಾರ್ಮಿಕರ ಧೀರ ಹೋರಾಟವು ದೇಶದ್ಯಾಂತ ಎಲ್ಲಾ ಕಾರ್ಮಿಕರ ದೃಷ್ಟಿಯನ್ನು ಸೆಳೆಯಿತು.

ಎರಡು-ಮೂರು ಬಾರಿ ಯಶಸ್ವಿಯಾಗಿ ಕರ್ನಾಟಕವನ್ನು ಬಂದ್ ಮಾಡುವ ಶಕ್ತಿ ನಮ್ಮ ಪಕ್ಷಕ್ಕೂ ಎಡಪಕ್ಷಗಳಿಗೂ ಸಾಧ್ಯವಿದೆ ಎಂದು ತೋರಿಸಿಕೊಟ್ಟಿತು.

ಮೂರು ವರ್ಷಗಳ ಸತತ ಕೇಂದ್ರ ಸಮಿತಿಯ ನೇತೃತ್ವದ ಹಾಗೂ ಸ್ವತಂತ್ರವಾದ ಹೋರಾಟಗಳ ಅಂತ್ಯದಲ್ಲಿ ಇದೀಗ ನವೆಂಬರ್ 27ರಿಂದ30ರವರೆಗೆ ಬೆಂಗಳೂರಿನಲ್ಲಿ 13ನೇ ಸಮ್ಮೇಳನವು ನಡೆಯಿತು.

ಅದು ಅತ್ಯಂತ ಯಶಸ್ವಿಯಾಗಿ ನಡೆಯಿತು. ಈ ತನಕ ಇಂತಹ ದೊಡ್ಡ ಶಿಸ್ತಿನ ಮೆರವಣಿಗೆ ಮತ್ತು ಸುಮಾರು 50 ಸಾವಿರಕ್ಕೂ ಕಡಿಮೆಯಿಲ್ಲದಷ್ಟು ಜನರಿಂದ ಕೂಡಿದ ಸಾರ್ವಜನಿಕ ಸಭೆ ಬೆಂಗಳೂರಿನಲ್ಲಿ ಕಮ್ಯುನಿಸ್ಟ್ ಪಕ್ಷದ ಚರಿತ್ರೆಯಲ್ಲೇ ನಡೆದಿಲ್ಲ ಎಂದು ಬೆಂಗಳೂರಿನ ಎಲ್ಲಾ ಜನವಿಭಾಗಗಳ ಒಮ್ಮತದ ಅಭಿಪ್ರಾಯ.

ಕೆಂಪು ಸಮವಸ್ತ್ರ ಧರಿಸಿದ ಐನ್ನೂರಕ್ಕೂ ಅಧಿಕ ಸ್ವಯಂಸೇವಕರ ಪಡೆ ಎಲ್ಲರ ಗಮನ ಸೆಳೆದಿತ್ತು. ಆಕರ್ಷಕವಾದ ಕ್ರಾಂತಿ ಗೀತೆಗಳನ್ನು ಹಾಡುವ ಮಹಿಳೆಯರ ಮತ್ತು ಪುರುಷರ ತಂಡವು ಕನ್ನಡದಲ್ಲಿ ಆರಂಭವಾದುದನ್ನು ಜನ ಸ್ವಾಗತಿಸಿತು. ನೂರಾರು ದಾರಿಬದಿ ಸಭೆಗಳು ಜನರಿಗೆ ಸಮ್ಮೇಳನದ ಸಂದೇಶವನ್ನು ತಲುಪಿಸಿದವು.

ಜನ ಮುಕ್ತವಾಗಿ ಸಮ್ಮೇಳನದ ಯಶಸ್ಸಿಗೆ ಧನ ಅರ್ಪಿಸಿದರು.

ಉದ್ಘಾಟನಾ ಸಭೆಗಳೂ, ಬಹಿರಂಗ ಸಭೆಗೂ ಜನರು ಅಪಾರ ಸಂಖ್ಯೆಯಲ್ಲಿ ಬಂದು ಸೇರಿದರು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಗ್ರಗಣ್ಯ ಮುಖಂಡರಲ್ಲಿ ಒಬ್ಬರಾದ ಕಾಂ.ಬಿ.ಟಿ.ರಣದಿವೆಯವರ ಸ್ಪಷ್ಟವಾದ ರಾಜಕೀಯ ವಿಶ್ಲೇಷಣೆಯನ್ನು ಕೇಳಿ ಪುಳಕಿತರಾದರು.

ಇಂದಿನ ದೇಶದ ದುಃಖದ ಪರಿಸ್ಥಿತಿಗೆ ರಾಜೀವ ಗಾಂಧಿಯವರ ನೇತೃತ್ವದ ಕಾಂಗ್ರೆಸ್(ಐ) ದುರಾಢಳಿತೆಯೇ ಕಾರಣ. ರಾಜೀವಗಾಂಧಿಯನ್ನು ಅಧಿಕಾರದಿಂದ ಇಳಿಸಿ ಎಡ, ಜಾತ್ಯಾತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಪರ್ಯಾಯವನ್ನು ಪರ್ಯಾಯ ಕಾರ್ಯಕ್ರಮದ ಆಧಾರದಲ್ಲಿ ಕಂಡು ಕೊಳ್ಳುವುದು ಈ ತುರ್ತಿನ ಕರ್ತವ್ಯವಾಗಿದೆ.ದೇಶದ ಜನ ಈ ತುರ್ತಿನ ಕರ್ತವ್ಯವನ್ನು ಪೂರೈಸ ವವರು ಎಂದು ಅವರು ಸ್ಪಷ್ಟಪಡಿಸಿದಾ ಅಪಾರ ಜನಸಂದಣಿ ಕರತಾಡ ಮಾಡಿತು.

ಈ ರಾಜೀವಗಾಂಧಿ ಸರ್ಕಾರವು ದು ರಾವಣನ ರಾಜ್ಯಭಾರಕ್ಕಿಂತಲೂ ಹಾ ಎಂದು ಉದ್ಗರಿಸಿದಾಗ ಸಭಿಕರು "ಹೌದು-ಹೌದು" ಎಂದು ತಲೆದೂ ಗಿದರು.

ತಿರುವನಂತಪುರದಲ್ಲಿ ನಡೆಯು 13ನೇ ಪಾರ್ಟಿ ಅಧಿವೇಶನದ ಯಶ ಎಲ್ಲರೂ ಸಹ ದುಡಿಯೋಣ. ಅಧಿವೇಶನವು ಭಾರತದ ಇತಿಹಾಸದ ಒಂದು ಹೊಸ ಅಧ್ಯಾಯನವ ಆರಂಭಿಸಲಿ ಎಂದು ಹಾರೈಸೋಣ.

Printed & Published by P. Ramachandra Rao on behalf of the Communist Party of India (Marxist) Karnataka State Committee, K.V. Temple Street, Sulthanpet, Bangalore-560053. Managing Editor: N.K.Upadhayaya. Managerial office: No.24, Shobha lodge Complex, 5th Main Road, Gandhinagar, Bangalore-5600